Licence No. 60.
Licenced to Post without Prepagmei

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. ೮-೦-೦.

ಸಂಪುಟ ೩೧ | ತಾರೀಕು ೨೯-೮-೧೯೫೩ನೇ ಶುಕ್ರವಾರ | ಸಂಚಿಕೆ ೧೩

THE JUBILEE INSURANCE CO., Ltd.

One of the very few in the feild of Insurance that has been declaring BONUS to its policy holders from its very inception.

RATE OF BONUS Rs. 10/- & Rs. 12/-

For particulars of Agency & Policy contracts apply to Sri P. C. KARAMBAYA of our Chief Agents at 41-C., Richmand Road, Bangalore.

Our Chief Agents:—THE ORIENTAL ENTERPRISES, BANGALORE 1.

ಜುಬಿಲಿ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಸ್ಥಾಪಿತವಾದಂದಿನಿಂದಲೂ ವಿಮೂದಾರರಿಗೆ ಸರಿಯೂದ ಬೋನಸ್ಸು ಕೊಡುತ್ತಿರುವ ಬಹು ಅಲ್ಪ ಸ್ವಲ್ಪ ವಿಮೂ ಕಂಪೆನಿಗಳಲ್ಲಿ ಜುಬಿಲಿಯೂ ಒಂದನೆಯದಾಗಿದೆ.

ಈಗಿನ ದರ ಬೋನಸ್ಸು:—ಪ್ರತಿ ಸಾವಿರಕ್ಕೆ ವರ್ಷಕ್ಕೆ ರೂ. 10/- ಮತ್ತು 12/-.

ಕಾರ್ಯಚತುರರಾದ ಆರ್ಗನೈಜರುಗಳೂ ಮತ್ತು ಏಜೆಂಟರುಗಳು ಬೇಕಾಗಿದ್ದಾರೆ. ವಿವರಗಳಿಗೆ ಈ ಕೆಳಗಿನ ಎಡ್ರೆಸ್ಸಿನ ನಮ್ಮ ಚೀಫ್ ಏಜೆಂಟರಿಗೆ ಒಪತ್ರ ಬರೆಯಿರಿ.

ದಿ ಓರಿಯಂಟೆಲ್ ಎಂಟರ್‌ಪ್ರೈಸಸ್,
41-C, ರಿಚ್‌ಮಂಡ್ ರೋಡ್, ಬೆಂಗಳೂರು 1.

22

ಪ್ರಥಮ ಭಾರತೀಯ ಮಹಾ ಸೇನಾನಿ

ಜಿ॥ ಕೆ. ಎಂ. ಕಾರ್ಯಪ್ಪನವರು

ಲೇ—ಶ್ರೀ ವಿ. ಎಸ್. ರಾಮಕೃಷ್ಣ ಬಿ. ಎಸ್‌ಸಿ (ಆನರ್ಸ್) ಬಿ. ಟಿ.

ಭದ್ರತಾಕಾಶ ಸೌಮ್ಯವಪೂರ್ಣವೂ ತಪಸ್ಸು ತಂದೆಯು ದ್ವಿತೀಯ ಪುತ್ರರು.

ಪ್ರಥಮ ಜಾಗತೀಕ ಯುದ್ಧದ ಸಮಯದಲ್ಲಿ ಕಾರ್ಯಪ್ಪನವರು ಕೊಡಗು ಜಿಲ್ಲೆಯ ಹಿರಿಯ ಪ್ರೌಢವಿದ್ಯಾಭ್ಯಾಸವಾದ ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ವ್ಯಾಸಂಗವನ್ನು ಮುಂದುವರಿಸುತ್ತಿದ್ದರು. ಪ್ರೌಢಶಾಲೆಯು ಅಂತ್ಯ ಪರೀಕ್ಷೆಯಲ್ಲಿ ಯಶಸ್ವಿಗಳಾಗಿ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಉಚ್ಚಶಿಕ್ಷಣವನ್ನು ಪಡೆದರು.

ವಿದ್ಯಾರ್ಥಿದೆಶೆಯಿಂದ ಸೈನಿಕ ಜೀವನದಲ್ಲಿ ಆಸಕ್ತಿ ಕಾಲಿಟ್ಟ ಕಾರ್ಯಪ್ಪನವರು ಇಂದೂರಿನ ಡೇಲಿಕಾಲೇಜ್ ಎಂಬ ಸೈನಿಕ ಶಿಕ್ಷಣಾಲಯದಲ್ಲಿ ಸೈನ್ಯವಿಜ್ಞಾನದ ಶಿಕ್ಷಣ ಪಡೆದು ಭಾರತೀಯ ಬಾಲಸೈನ್ಯ ಪಂಗಡದಲ್ಲಿ ಪ್ರಥಮ ಬಾರಿಗೆ ೧೯೧೯ ರಲ್ಲಿ ಆರಿಸಲ್ಪಟ್ಟರು. ೧೯೨೦ರಿಂದ ೧೯೨೨ರ ವರೆಗೆ ಇರಾಕ್ ಎಂದು ಈಗ ಸಂಬೋಧಿಸಲ್ಪಡುವ ಮೆಸೊಪೊಟೇಮಿಯದಲ್ಲಿ ನೇಟಿಯರ್ ರೈಫಲ್ಸ್ ಎನ್ನುವ ಸಶಸ್ತ್ರ ಪಡೆಯಲ್ಲಿ ಅಧಿಕಾರಿಯೂಗಿದ್ದರು. ತರುವಾಯ ವಸ್ತೀರಿಸ್ತಾನದಲ್ಲಿ ಡೋಗ್ರ ಮತ್ತು ರಜಪೂತ ಸೈನ್ಯದಲ್ಲಿ ಅಧಿಕಾರಿಗಳಾಗಿ ೧೯೨೨ರಿಂದ ೧೯೨೫ರ ವರೆಗೆ ವಿಶೇಷ ಗಳಲ್ಲಿ ಸೈನಿಕ ಜೀವನವನ್ನು ನಿರ್ವಹಿಸಿದರು.

೧೯೩೬ರ ಜೂನಿಗೆ ಕಾರ್ಯಪ್ಪನವರು ಡೆಕ್ಕಾನ್ ಜಿಲ್ಲೆಯಲ್ಲಿ ಸೈನಿಕ ವಲಯದಂಡರಾಗಿ ನಿಯೋಜಿತರಾದರು. ೧೯೩೮ರಲ್ಲಿ ಡೆಕ್ಕಾನ್ ಜಿಲ್ಲೆಯ ಪ್ರಾದೇಶಿಕ ಸೈನ್ಯಾಧಿಕಾರಿಯೂಗಿ ನಿಯುಕ್ತರಾದರು. ಸೈನಿಕ ಅಧಿಕಾರ ಶ್ರೇಣಿಯಲ್ಲಿ ದ್ವಿತೀಯ ಸ್ಥಾನವಾದ ಈ ಅಧಿಕಾರಕ್ಕೆ ಬಂದ ಭಾರತೀಯರಲ್ಲಿ ಕಾರ್ಯಪ್ಪನವರೇ ಮೊದಲಿಗರು. ೧೯೩೯ರಲ್ಲಿ ಪೋಜಪ್‌ದಳ ಎಂದು ಕರೆಯಲ್ಪಡುತ್ತಿದ್ದ ೫೦ನೇ ಭಾರತೀಯ ಕಾಲ್ದಳ ದಳಾಧಿಪತಿಯೂದರು.

ದ್ವಿತೀಯ ಜಾಗತೀಕ ಮಹಾಸಮರವು ೧೯೩೯ರಲ್ಲಿ ಘೋಷಿಸಲ್ಪಟ್ಟಾಗ ಕಾರ್ಯಪ್ಪನವರು ೧೦ನೇ ಭಾರತೀಯ ಸೈನ್ಯದಳದ ಅಧಿಪತಿಯೂಗಿ ೧೯೪೧ರಿಂದ ೧೯೪೩ರ ವರೆಗೆ ಇರಾಕ್, ಇರಾನ್, ಸಿರಿಯ ಮುಂತಾದ ಮಧ್ಯಪ್ರಾಚ್ಯ ದೇಶಗಳಲ್ಲಿ ಸೈನಿಕ ಕ್ಷೇತ್ರದಲ್ಲಿ ಸೇವೆಸಲ್ಲಿಸಿದರು. ೧೯೪೨ರಲ್ಲಿ ೫ನೇ ರಾಜಪುತ ಸೈನ್ಯ ಭಾಗದ ಸೇನಾಧಿಕಾರಿಯೂಗಿ ಯೂಂಫ್ರೇಟಿಸ್ ಕುಫ್ರಾಕಿ (ಯೂಫಿನ್ ಗನ್) ಪಡೆಯ ದಿಗ್ದರ್ಶನವನ್ನು ನೂಡಿದರು. ೧೯೪೩ರಲ್ಲಿ ಪ್ರಾಚ್ಯಸೈನ್ಯದ ಪ್ರಾದೇಶಿಕ ಅಧಿಕಾರಿಯೂಗಿ ನಿಯಮಿಸಲ್ಪಟ್ಟರು. ಅಗಲೇ ಬ್ರಹ್ಮದೇಶದ ಅರಾಕಾನ್ ರಣಕ್ಷೇತ್ರದಲ್ಲಿ ೩೬ ವೇ ಭಾರತೀಯ ಸೈನ್ಯ ವಿಭಾಗದ ಅಧಿಕಾರಿಯೂಗಿ ದುಡಿದರು. ೧೯೪೪ರಲ್ಲಿ ಸೈನ್ಯ ಪುನರ್ವ್ಯವಸ್ಥಾಪನಾ ಸಮಿತಿಯಲ್ಲಿ ಸೈನ್ಯ ದಳಾಧಿಕಾರಿಯೂಗಿ ನಿಯುಕ್ತರಾಗಿ ಅಲ್ಲಿಯ ಮುಗಿದ ನಂತರ ಬನ್ನು ಗಡೀನಾಡು ಪ್ರಾಂತೀಯ ಸೈನ್ಯದಳದ ಅಧಿಪತ್ಯವನ್ನು ವಹಿಸಿಕೊಂಡರು. ೧೯೪೬ರಲ್ಲಿ ಸಶಸ್ತ್ರ ಸೈನ್ಯ ಪುನರ್ರಚನಾ ಸಮಿತಿಯಲ್ಲಿ ಸೇವೆಸಲ್ಲಿಸಿ ಅದೇ ವರ್ಷ ಪ್ರಾಮುಖ್ಯ ದಳಪತಿಯೂಗಿ ನಿಯುಕ್ತಿಗೊಳ್ಳುವ ಭಾರತೀಯ ಸೈನ್ಯಪಡೆಯ ಪೂರ್ವ ಪ್ರಾದೇಶಿಕ ಮಹಾ ಸೈನ್ಯಾಧಿಕಾರಿಯ ಪದವಿಗೇರಿಸಲ್ಪಟ್ಟರು. ೧೯೪೮ರಲ್ಲಿ ಪೂರ್ವ ಪ್ರಾದೇಶಿಕ ಸೈನ್ಯಾಧಿಕಾರವನ್ನು ಬಿಟ್ಟು ಪಶ್ಚಿಮ ಪ್ರಾದೇಶಿಕ ಸೈನ್ಯಾಧಿಕಾರಿಯ ಸ್ಥಾನವನ್ನಲಂಕರಿಸಿದರು. ೧೯೪೯ರ ಜುಲೈ ೧೫ನೇ ತಾರೀಕಿನಲ್ಲಿ ಸ್ವತಂತ್ರ ಭಾರತದ ಪ್ರಥಮ ಭಾರತೀಯ ಮಹಾಸೇನಾನಿಯೂಗಿ ಅಭಿಷಿಕ್ತರಾಗಿ ಸೈನಿಕ ಅಧಿಕಾರ ಶ್ರೇಣಿಯಲ್ಲಿ ಮಹೋನ್ನತಸ್ಥಾನ ಪಡೆದು ಭಾರತದ ರಾಷ್ಟ್ರೀಯ ಇತಿಹಾಸದಲ್ಲಿ ಅಳಿಯದ ಸ್ಥಾನವನ್ನು ಗಳಿಸಿಕೊಂಡು ಕೀರ್ತಿಯ ಶಿಖರವನ್ನೇರಿದರು.

ಭಾರತೀಯ ಭೂಸೈನ್ಯ ಮಹಾಪಡೆಯು ಹಲವು ರೀತಿಯಲ್ಲಿ ಆದರ್ಶಮಯ ಸಂಸ್ಥೆಯೂಗಿರುವುದು. ಅನ್ಯದೇಶೀಯ ಶತ್ರುಗಳಿಂದ ಭಾರತದ ಭದ್ರತೆಗೆ ಧಕ್ಕೆ ಬಂದಾಗ ಮಾತ್ರ ಧರ್ಮ ಸಮರವನ್ನು ಹೂಡಲು ಸಿದ್ಧವಿರುವ ಸಂಘಜೀವಿತ ಭಾರತೀಯ ಸೈನ್ಯವು ಇತರ ದೇಶಗಳಲ್ಲಿ ಅಹಿಂಸಾತ್ಮಕ ಧೋರಣೆಯಿಂದ ರಾಷ್ಟ್ರ ರಚನಾಕಾರ್ಯದಲ್ಲಿ ತೊಡಗಿಸಲ್ಪಟ್ಟಿರುವುದು. ಇಂತಹ ಶಿಸ್ತಿನಿಂದ ಕೂಡಿದ ಸುಸಜ್ಜಿತ ಆಧುನಿಕ ಮಹಾಯೋಧ ಪಡೆಗೆ ಯೋಧಾಗ್ರಣಿಗಳಾದ ಕಾರ್ಯಪ್ಪನವರು ಮಹಾಸೇನಾನಿಯೂಗಿ ತೊಡಿಸಿಕೊಂಡಿದ್ದು ಭಾರತದ ಭಾಗ್ಯ. ಮಹಾಸೇನಾನಿ ಕಾರ್ಯಪ್ಪನವರ ಮೂಗದರ್ಶನದಲ್ಲೇ ಕಾಶ್ಮೀರದ ದುರಂತವು ಬಗೆಹರಿಸಲ್ಪಟ್ಟು ಭಾರತೀಯ ಸೈನ್ಯದ ಮಹಾತೇಜಸ್ಸು ಹೊರಹೊಮ್ಮಿರುವುದು. ಇವರ ಪ್ರಮುಖತ್ವದಲ್ಲಿ ಬೆಳೆದ ರಾಷ್ಟ್ರೀಯ ಮಹಾಸೇನೆಯು ಸಂಖ್ಯಾಬಲದಿಂದ ಚಿಕ್ಕದಾದರೂ ಪ್ರಪಂಚ ರಾಷ್ಟ್ರಗಳ ಸೇನೆಗಳಿಗೆ ಶಕ್ತಿ ಸಾಹಸಗಳಲ್ಲೂ, ಧೈರ್ಯ ಸ್ಥೈರ್ಯ ಪರಾಕ್ರಮಗಳಲ್ಲೂ, ಶಿಸ್ತಿನ ಅತ್ಯಬಲದಲ್ಲೂ ಸರ್ವದಾ ಆದರ್ಶಮಯವಾಗಿ ಖ್ಯಾತಿಪಡೆಯುವುದೆಂಬುದರಲ್ಲಿ ಸಂದೇಹವಿಲ್ಲ.

"ಇಂದಿನ ಭಾರತೀಯ ವಿದ್ಯಾರ್ಥಿಗಳಲ್ಲಿ ಶಿಸ್ತಿಲ್ಲವೆಂದು ಹೇಳಲು ನಾನು ಬಯಸುವುದಿಲ್ಲ. ಅವರಲ್ಲಿ ಶಿಸ್ತಿದೆ. ಕೆಲವು ನ್ಯೂನತೆಗಳಿವೆ. ಆದರೆ ಕೆಲವು ವಿದ್ಯಾರ್ಥಿಗಳು ತಮ್ಮ ಸ್ವಂತ ಉದ್ದಿಶ್ಯ ಸಾಧನೆಗಾಗಿ ವಿದ್ಯಾರ್ಥಿವೃಂದವನ್ನು ತಪ್ಪು ದಾರಿಯಲ್ಲಿ ಎಳೆಯುತ್ತಿರುವರು. ಈ ಕೆಳಕಿಗಳ ದುರ್ಬೋಧನೆಗಳಿಗೆ ಕಿವಿಗೊಡದೆ ತಮ್ಮ ವಿದ್ಯಾಸಂಸ್ಥೆಗೂ ಅಧ್ಯಾಪಕರಿಗೂ ಪೋಷಕರಿಗೂ ಮನ್ನಣೆಯಿತ್ತು ವಿದ್ಯಾರ್ಥಿ ಜೀವನದಲ್ಲಿ ತಮ್ಮ ಸರ್ವತೋಮುಖವಾದ ಬೆಳವಣಿಗೆಯನ್ನು ವಿದ್ಯಾರ್ಥಿಯು ಸಾಧಿಸಿಕೊಳ್ಳಬೇಕು. ಕೇವಲ ಮಾನಸಿಕ ಬೆಳವಣಿಗೆಯಿಂದ ಪ್ರಯೋಜನವಿಲ್ಲ. ದಾರ್ಢ್ಯಪೂರ್ಣವೂ ನಿರೋಗಯುತವೂ ಸೌಷ್ಠವಪೂರ್ಣವೂ ಆದ ದೇಹವನ್ನು ವಿದ್ಯಾರ್ಥಿಗಳು ಒಜ್ಜಿಸಿಕೊಳ್ಳಬೇಕು. ನಿರ್ಮಲಯುತವಾದ ಶಿಸ್ತಿನ ಜೀವನ, ಪೌಷ್ಟಿಕ ಆಹಾರಸೇವನೆ, ವ್ಯಾಯಾಮ, ಸಾಂಘಿಕವಾದ ಆಟೋಟಗಳು ಇವುಗಳಿಂದ ಶಾರೀರಿಕ ಬೆಳವಣಿಗೆಯಂತೆಯೂ ಸ್ವಾರ್ಥವನ್ನು ಕಡಮೆಯಾಗಿ ಸಾಮೂಹಿಕ

ಸಾಮೂಹಿಕ ವಿಕಾಸ ಯೋಜನೆ.

ಪ್ರಧಾನ ಮಂತ್ರಿ ನೆಹರೂರವರು ಪ್ರೊಜೆಕ್ಟ್ ಆಫೀಸರಿಗೆ ಕೊಟ್ಟ ಸಂದೇಶ.

"ಇಂಡಿಯಾ ದೇಶವಲ್ಲೆಲ್ಲಾ ಹರಡಿರುವ ೫೫ ಕಮ್ಯೂನಿಟಿ ಪ್ರೊಜೆಕ್ಟ್ ಸೆಂಟರುಗಳು ದೇಶದ ವಿಸ್ತೀರ್ಣದ ಮಟ್ಟಿಗೆ ಬಹು ಕೊಂಚವೇ ಆಗಿರಬಹುದು. ಆದರೂ ಅದೂ ಒಂದು ದೊಡ್ಡ ಅಂಶವೇ! ಈ ಪ್ರೊಜೆಕ್ಟ್‌ಗಳು ಸರಿಯಾಗಿ ಕಾರ್ಯಗತವಾಗದೆ ಸುತ್ತು ಮುತ್ತಲಿನ ಪ್ರದೇಶಗಳು ಸಹ ಬಲವಂತವಾದ ಉತ್ತೇಜನಗೊಳ್ಳುತ್ತವೆ.

ದೊಡ್ಡ ಪ್ರೊಜೆಕ್ಟ್‌ಗಳು ಪ್ರಾವಲ್ಯವೆಂಬುದರಲ್ಲಿ ಸಂಶಯವಿಲ್ಲ ಆದರೆ ಅವುಗಳು ಜನರನ್ನು ಬಹಳ ಬೇಗನೆ ಸುಟ್ಟಲೊಲ್ಲವು. ಲಕ್ಷಾಂತರ ಉತ್ಸಾಹಭರಿತರಾದ ಜನರಿಂದ ನಡೆಸುವ ಯೋಜನೆಗಳು ಜನರ ಹೃದಯಕ್ಕೆ ನಾಟುವವು. ಆದುದರಿಂದ ಈ ಸ್ಕೀಮುಗಳು ಒಂದು ಒಕ್ಕೆಯ ಯೋಜನೆಯೆಂದು ತಿಳಿಯುಬಹುದು. ಏಕೆಂದರೆ ಕೆಲ ಸಮಯದ ನಂತರ ಅದರ ಉದ್ಘಾಟನೆಯಲ್ಲಿಯೇ ಸ್ವತಃ ಲಾಭಜನಕವಾದ ಫಲಗಳನ್ನು ಅದೇ ಉದ್ಭವಿಸಬಹುದು.

ಇಂದು ಇಂಡಿಯಾ ದೇಶವು ಮತ್ತು ಪ್ರಪಂಚವು ಒಂದು ಮೊಪ್ಪಾಟಿನ ಯುಗದಲ್ಲಿ ಚಲಿಸುತ್ತಿದೆ ಎಂಬುದಾಗಿ ಹೇಳುವದು ವಾಡಿಕೆಯಾಗಿದೆ. ಆದರೂ ಇಂದು ನಮ್ಮ ದೇಶದಲ್ಲಿಯೂ ಪ್ರಪಂಚದ ಅನೇಕ ಸ್ಥಳಗಳಲ್ಲಿಯೂ ನಡೆಯುವ ಸಂಗತಿಗಳೆಲ್ಲವೂ ದೊಡ್ಡ ಬದಲಾವಣೆಗಳ ಚಿನೆಗಳು. ಇವೆಲ್ಲಕ್ಕೂ ನಾವು ಒರೇ ಪ್ರೇಕ್ಷಕರಾಗಿಯೂಗಲೀ, ಯಾ ಪರರ ಆಟದ ಗೊಂಬೆಗಳಾಗಿಯೂಗಲೀ ಇರಕೂಡದು. ಇವೆಲ್ಲಕ್ಕೂ ನಾವು ಸರಿಪಡಿಸಿಕೊಳ್ಳಬೇಕಾಗಿದೆ. ಇಂತಹ ಸರಿಪಡಿಸುವಿಕೆಯು ಕಲಹ ಸ್ಥಿತಿಯಲ್ಲಾಗಲೀ ಯಾ ಶಾಂತಿರೂಪ ದಲ್ಲಾಗಲೀ ಜರಗಬಹುದು. ಆದರೆ, ಈ ಸಾಮೂಹಿಕ ವಿಕಾಸ ಯೋಜನೆಯು ಕಾರ್ಯಕ್ರಮದಲ್ಲಿ ಶಾಂತಿರೂಪವಾದ ಕಾರ್ಯಸಾಧನೆಯೇ ಗುರಿಯಾಗಿದೆ. ಈ ಮಾರ್ಗದಲ್ಲಿ ಅದು ಪೂರ್ಣ ಜಯಪ್ರದವಾಗದಿದ್ದರೂ ಯಾವುದೇ ಮಾರ್ಗದಲ್ಲಿ ಅನುಭವಿಸಬಹುದಾದ ವ್ಯತೀಕ್ಷ್ಣ ಫಲವನ್ನು ಅನುಭವಿಸಲಾರದು. ತಳಹದಿಯಲ್ಲಿಯೇ ಹುಟ್ಟಿದುದರಿಂದ ಅದಕ್ಕೆ ಏನೋ ಒಂದು ವಿಧದ ಅಂತ್ಯದ ಅಧಿಕಾರ ಶಕ್ತಿಯು ಇದೆ.

ನೀವು ಎಷ್ಟರ ಮಟ್ಟಿಗೆ ಧರ್ಮಯುದ್ಧವೆಸಗುವವರಾಗಿಯೋ ಯಾ ಧರ್ಮಬೋಧಕರಾಗಿಯೋ ನಿಮ್ಮ ನಿಮ್ಮ ಸ್ಥಳಗಳಿಗೆ ಹಿಂದಿರುಗುವಿರೆಂದು ನಿಮ್ಮ ಮನಸ್ಸನ್ನು ಪರೀಕ್ಷಿಸಿ ನೀವೇ ಕಂಡು ಹಿಡಿಯಿರಿ. ಸರಕಾರದ ರೀತಿಯಲ್ಲಿ ಒಂದು ತರದ ಶ್ರೇಯಸ್ಸಿತ್ತು, ಆದರೆ ಅದರ ಪದ್ಧತಿಯು ಯಾವುದಾಪತ್ತೊಂದನ್ನು ಹೊಸ ರೀತಿಯಲ್ಲಿ ಬಗೆಹರಿಸಲು ಸಂಬೀಳ ಗೊಡುವುದಿಲ್ಲ. ಮಹಾತ್ಮಾ ಗಾಂಧೀಜಿಯವರೊಂದಿಗೆ ವಿಳಿತವಾಗುವ ಪುಣ್ಯ ಲಭಿಸಿದ ನಮಗೆ, ಹೇಗೆ ಒಬ್ಬ ಮನುಷ್ಯನು ಜನತೆಯ ಅಮಾನುಷ ಪ್ರಭಾವವನ್ನು ಎಬ್ಬಿಸಿ ಪರದೇಶಿ ಸರಕಾರವನ್ನು ಅದರ ಮೊಣಕಾಲಿಗೆ ತ್ತಂದನೆಂದು ಗೊತ್ತಿದೆ. ಆದರೆ ಅಂತಹ ಅಮಾನುಷ ಪ್ರಭಾವವನ್ನು ಎಬ್ಬಿಸಲು ಎಲ್ಲರಿಂದಲೂ ಎಲ್ಲಾ ಸಮಯದಲ್ಲಿಯೂ ಶಾಧ್ಯವಿಲ್ಲದಿದ್ದರೂ ಅದರ ಒಂದಂಶ ಉತ್ಸಾಹವನ್ನು ಜನರಲ್ಲಿ ಎಬ್ಬಿಸಿದೇ ಆದರೆ, ನಾವು ನಮ್ಮ ಕಾರ್ಯಸಾಧನೆಗೆ ಒಂದು ಮಹತ್ತಾದ ಶಕ್ತಿಯನ್ನು ಕೊಟ್ಟಂತಾಗುವುದು.

ಈ ಪ್ರೊಜೆಕ್ಟಿನ ಕೆಲಸವು ಸಂಪೂರ್ಣವಾಗಿ ರಚನಾತ್ಮಕವಾಗಿದೆ. ಇದು ನಾಶ ಮಾಡುವುದಕ್ಕಿಂತ ಬಹಳ ಕಷ್ಟವಾದದ್ದು. ದೇಶದ ಸಾಮಾನ್ಯ ಪ್ರಜೆಯು, ದೇಶದ ರಚನೆಯಲ್ಲಿ ಒಂದು ಪ್ರಾಮುಖ್ಯ ಪಾತ್ರವನ್ನು ನಡೆಸುವವನೆಂದು ಅವನಿಗೆ ಮನದಟ್ಟು ಮಾಡಬೇಕು. ಇಡೀ ಹಿಂದೂದೇಶವನ್ನು ಹೊಸದಾಗಿ ಕಟ್ಟುವುದರಲ್ಲಿ ಅತನೂ ಕೂಡ ಓರ್ವ ಪಾಲುದಾರನೆಂಬ ಮನವರಿಕೆಯು ಅತನಲ್ಲಿ ಉಂಟಾಗುವಂತೆ ಮಾಡಬೇಕು. ಅತನಿಗೆ ಅವನು ಕೈಕೊಂಡ ಕೆಲಸದಲ್ಲಿ ಒಂದು ಹೆಮ್ಮೆ ಇದ್ದು ಇದರಿಂದ ಕೀರ್ತಿ ಲಭಿಸುತ್ತಿದೆ ಎಂಬ ಜ್ಞಾನವನ್ನು ಎಚ್ಚರಿಸಬೇಕು. ಇಂತಹ ಒಂದು ಉತ್ಸಾಹವನ್ನು ಜನರಲ್ಲಿ ಹರಡಬೇಕಾದರೆ ಅಧಿಕೃತಗಳೇ ಮೊದಲಾಗಿ ಉತ್ಸಾಹಭರಿತರಾಗಬೇಕು. ಪರರಿಗೆ ಜ್ಞಾನವನ್ನು ಕೊಡುವರೇ ತಾವೇ ಜ್ಞಾನಿಗಳಾಗಬೇಕು.

ಬರೀ ಭಾವನೆ ಯಾ ತಕ್ಕ ಕಾಲದಲ್ಲಿ ಅಭಿಪ್ರಾಯಗಳನ್ನು ಕಾರ್ಯರೂಪಕ್ಕೆ ತರುವುದು ಹೇಗೆಂಬುದನ್ನು ತಿಳಿದಿರಬೇಕಾದುದು ಅವಶ್ಯ, ಈ ಪಥಮೂಢಾಯಗಳಲ್ಲಿ ಸಾಧನಾ ಜ್ಞಾನದಲ್ಲಿ ನೀವು ತಜ್ಞರಾಗಬೇಕು. ಈ ವಿಜ್ಞಾನ ಕವಚವನ್ನು ಧರಿಸಿ ಅಧಿಕಾರಿಗಳು ಬಹು ಮರ್ಯಾದೆಯಿಂದಲೂ, ನಮ್ರತೆಯಿಂದಲೂ ಹೆಳ್ಳಿಯವರನ್ನು ಕಾಣಬೇಕು. ಹೆಳ್ಳಿಯವರು ಮೂಢರೆಂಬ ತಪ್ಪು ಭಾವನೆಯನ್ನು ಮೂಡಬೇಡಿ ಸಾಧಾರಣ ಹೆಳ್ಳಿಯವನಿಗೆ ಜೀವನಾನುಭವಗಳ ಅನುಭವವಿರುವುದರಿಂದ. ನಿಮಗಿಂತೆಲೂ ತಿಳಿದಿದೆ ಅದರಿಂದ ನಿಮಗೇ ಹೆಚ್ಚು ಗೊತ್ತಿದೆ ಎಂಬ ಅಭಿಪ್ರಾಯದಿಂದಿರದೆ ಅವರನ್ನು ನಿಮ್ಮಲ್ಲಿಗೆ ಆಕರ್ಷಿಸಿ, ಅವರಲ್ಲಿ ನಂಬಿಕೆಯನ್ನು ಹುಟ್ಟಿಸಬೇಕು.

ಕಮ್ಯೂನಿಟಿ ಪ್ರೊಜೆಕ್ಟ್‌ಗಳ ಗುರಿಯು ಎರಡು ವಿಧ: ಒಂದನೇಯದು ಮಾನವನ ಉಚ್ಚಸ್ಥಿತಿ; ಎರಡನೇಯದು ಕೃಷಿ ವಿಷಯಗಳಲ್ಲಿ ಅತನ ಸಾಧನಾ ಜ್ಞಾನದ ಮೇಲ್ಮೆ. ಇವೆರಡನ್ನು ಸಾಧಿಸಿದರೆ ನಾವು ಒಂದು ಮಹತ್ತಾದ ಜಡ ಲಾವಣೆಯನ್ನು ತಂದಂತಾಗುವುದು ಅದರಲ್ಲೂ ದೇಶದ ಉದ್ದಗಲಕ್ಕೂ ಯಾವುದೊಂದು ಗೊಂದಲವಿಲ್ಲದೆ ತಂದಂತಹ ಒಂದು ಜಡಲಾವಣೆಯಾಗುವುದು. ದೇಶದಲ್ಲಿ ಗಲಿಬಿಲಿಗಳುಂಟಾದರೆ ನನಗೆ ಭಯವಿಲ್ಲ; ಆದಕಿ, ದೇಶಕ್ಕಾಗಿ ದೇಶದ ಐಶ್ವರ್ಯವನ್ನು ಹೆಚ್ಚಿಸಲು ಉಪಯೋಗಿಸಬಹುದಾದ ದೇಶದ ಶಕ್ತಿಯನ್ನು ಈ ರೀತಿ ಕಳೆದುಕೊಳ್ಳುತ್ತಾರೆಂದಾಗಿ ನನಗೆ ಕೋಪವೇರುತ್ತೆ.

ಧೀರ್ಘಾಯುಷ್ಯದ ಗುಟ್ಟು!

"ಸದಾ ಪ್ರಸನ್ನ ಚಿತ್ತರಾಗಿರಿ, ಸ್ವಾಭಾವಿಕ ಹಸನ್ಮುಖಿಗಳಾಗಿರಿ ಎಂಥ ಪ್ರಸಂಗದಲ್ಲಿಯೂ ಮನಸ್ಥಾಸ್ಥ್ಯವನ್ನು ಕಳೆದುಕೊಳ್ಳಬೇಡಿರಿ, ಕ್ರೋಧಾವಿಷ್ಟರಾಗಬೇಡಿರಿ ಇದೇ ದೀರ್ಘಾಯುಷ್ಯದ ಗುಟ್ಟು."

ಅಮೇರಿಕೆಯ ಚಿಕ್ಕಾಗೋ ನಗರದಲ್ಲಿ ೧೦೦ ಜನ ಡಾಕ್ಟರರ ಸಭೆಯೊಂದರಲ್ಲಿ ಕೂಡಿದಾಗ ಡಾ. ನೋರಿಸ್ ಫಿಶ್‌ಬೆನ್ ಎಂಬ ವೈದ್ಯಕೀಯ ಶಾಸ್ತ್ರಜ್ಞರು ಮನುಷ್ಯನು ಶತಾಯುಷಿಯಾಗಬೇಕಾದರೆ ಅವನು ಹೇಗೆ ತನ್ನ ಜೀವನವನ್ನು ಸಾಗಿಸಬೇಕೆಂಬುದನ್ನು ವಿವರಿಸಿದರು.

ಆ ಸಂಧರ್ಭದಲ್ಲಿ ಆ ಶ್ರೀಕಾಗೋ ನಗರಕ್ಕೆ ಸಲಹೆ ಸೂಚನೆಗಳನ್ನು ಕೊಡುವ ಮೊದಲು ಬ್ರಿಟನಿನ ಪ್ರಖ್ಯಾತ ವೈದ್ಯ ಶಾಸ್ತ್ರಜ್ಞರಾದ ಲಾರ್ಡ್ ವರ್ಷ ವಯಸ್ಸಿನ ಲಾರ್ಡ್ ಹೋರ್ಡ್‌ರವರನ್ನು ಕಂಡು ಅವರೊಡನೆ ತಾವು ನಡೆಸಿದ ಸಂಭಾಷಣೆಯನ್ನು ವಿವರಿಸಿದ್ದು ಅದು ಮನೋರಂಜಕಪೂರ್ಣವೂ ಪ್ರಯೋಜಕವೂ ಇದೆ.

(೭ನೇ ಪುಟ ನೋಡಿ)

ಹಿಳ್ಳೆಪ್ಪಗತಿಗಾಗಿ ವಿದ್ಯಾರ್ಥಿಗಳು ಶ್ರಮವಿಸಬೇಕು. ವಿದ್ಯಾರ್ಥಿಗಳೇ ರಾಷ್ಟ್ರದ ಅತುಳ ಸಂಪತ್ತು. ಸೈನ್ಯದಲ್ಲಿರುವಂತೆ ಜಾತ್ಯಾತೀತ ವರ್ಗರಹಿತ ಸಮಾಜ ನಿರ್ಮಾಣ ಮಾಡಲು ವಿದ್ಯಾರ್ಥಿಗಳು ಪಣಂಬರಬೇಕು. ಭಾರತದ ರಾಷ್ಟ್ರೀಯ ಸಾಂಸ್ಕೃತಿಕ ಹಿಪ್ಪಲೆಯಲ್ಲಿ ವಿದ್ಯಾರ್ಥಿಗಳು ಬೆಳೆದು ತ್ರೀರಾಮ ಜಂದ್ರ, ತ್ರೀಕೃಷ್ಣ, ಭಗವಾನ್ ಬುದ್ಧ, ಮಹಾತ್ಮಗಾಂಧೀ ಮುಂತಾದ ದಿವ್ಯಜ್ಯೋತಿಗಳಾದ ಭಾರತೀಯರನ್ನು ತೋರಿಸಿಕೊಟ್ಟ ಪಾಠಿಯಲ್ಲಿ ನಡೆದು ಭಾರತದ ಕೀರ್ತಿಧ್ವಜವನ್ನು ಎತ್ತಿಹಿಡಿಯಬೇಕು. ವಿದ್ಯಾರ್ಥಿದೆಶೆಯಲ್ಲಿ ನೈತಿಕ ಸಂಪತ್ತನು ಅಭಿವೃದ್ಧಿಗೊಳಿಸಿಕೊಳ್ಳುವುದು ಅಗತ್ಯವಾದುದರಿಂದ ಕ್ಷುಲ್ಲಕವಾದ ಅನೈತಿಕವಾದ ಉತ್ಸೇಕಪೂರ್ಣ ದೃಶ್ಯಗಳೆಡೆಗೆ ಯುವಕರು ಪುಳಸ್ಸುಗೊಡಬಾರದು. ರಚನಾತ್ಮಕ ಕಾರ್ಯದಲ್ಲಿ ಮನವಿಕ್ಕಿ ದುರ್ಲಾಗ್ಯಪ್ರಪ್ರಥರ್ತಕ ಮನಸ್ಸನ್ನು ಸಶಕ್ತಾಗ್ಗದಲ್ಲಿ ಹೊರಿಸಬೇಕು. ಹೀಗಾದ ರೀತಿ ಉತ್ಕರ್ಷವಾದ ವ್ಯಕ್ತಿತ್ವವನ್ನು ಕಟ್ಟಿಕೊಂಡು ಸ್ವತಂತ್ರಭಾರತದ ಹಿರಿಮೆಯನ್ನು ದಿಗ್ದಿಗಂತಗಳಲ್ಲಿ ಮೊಳಗಿಸಲು ಸಾಧ್ಯ. "ಎಂಡು ಜಫರಲ್ ಕಾರ್ಯಪ್ಪನವರು ಕಾವು ಹೋದ ವಿದ್ಯಾಸಂಸ್ಥೆಗಳಲ್ಲೆಲ್ಲಾ ವಿದ್ಯಾರ್ಥಿಗಳಿಗೆ ದೇಶಭಕ್ತಿರಕ್ತವನ್ನು ದೇಹಗಳು. ಸ್ವತಃ ಅಚರಣೆಯಲ್ಲಿ ಈ ಆದರ್ಶಗಳನ್ನು ರಾಷ್ಟ್ರದ ಮುಂದಿಟ್ಟು ಪ್ರದರ್ಶಿಸಿದ ಕಾರ್ಯಪ್ಪನವರ ಉಪದೇಶಾಮೃತವನ್ನು ನಮ್ಮ ನಾಡಿನ ವಿದ್ಯಾರ್ಥಿಗಳು ಪಾಲಿಸಿ ಶಿಸ್ತಿನ ಸಿಪಾಯಿಗಳಾಗಿ ಬಾಳಿ ನಾಡಿನ ಅಮಲಕೀರ್ತಿಯನ್ನು ಬೆಳಗಿಸುವ ದಿವ್ಯದಿನ ಇವೀಗ ಸಂಪ್ರಾಪ್ತವಾಗಿದೆ.

ಜನರಲ್ ಕಾರ್ಯಪ್ಪನವರು ವಿದ್ಯಾರ್ಥಿಗಳ ಅಭಿವೃದ್ಧಿಯ ಕಡೆಗೆ ಹೆಚ್ಚು ಶ್ರದ್ಧೆವಹಿಸುವರು. ತಮ್ಮ ಜ್ಞಾನದಾಯಿನೀ ಸಂಸ್ಥೆಯಾದ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಿದ್ಯಾರ್ಥಿಗಳನ್ನು ರಾಷ್ಟ್ರೀಯ ಬಾರಿಳ ಸೈನ್ಯಪಡೆಯನ್ನು ಸಂದರ್ಶಿಸುವಾಗ ಅವರು ವಿದ್ಯಾರ್ಥಿಗಳಿಗೆ ತೋರಿಸಿದ ವೈಚಾರಿಕ ಶ್ರದ್ಧೆಯೇ ಇದಕ್ಕೆ ನಿದರ್ಶನವಾಗಿದೆ. ಶಾರೀರಿಕ ಬಲವಿಲ್ಲದ ಬಾಲಕವನ್ನು ನೋಡಿ ಜನರಲರು ಪಶ್ಚಾತ್ತಾಪ ಪಡುವರು. ಸುಧೃಡ ಸುಕಾಯರಾದ ಬಾಲ ಜನಾಂಗದಿಂದಲೇ ರಾಷ್ಟ್ರೀಯ ಅಭ್ಯುದಯವು ಸಾಧ್ಯವೆಂದವರು ಜೀವ್ಮಾನಿ ಮನಗಂಡಿರುವರು.

ಜ|| ಕಾರ್ಯಪ್ಪನವರು ಪ್ರಪಂಚದ ನಾನಾ ಖಂಡಗಳನ್ನೂ ರಾಷ್ಟ್ರಗಳನ್ನೂ ಸುತ್ತಿರುವರು. ೩೦ ವರುಷಗಳ ಧೀರ್ಘಕಾಲ ಭಾರತದ ಸೇನಾದಳದಲ್ಲಿ ಸೇವೆಸಲ್ಲಿಸಿ ೧೯೫೩ ಜನವರಿಯಲ್ಲಿ ಕೆಲಸದಿಂದ ನಿವೃತ್ತರಾಗುವರು. ಲೆಫ್ಟನೆಂಟ್ ಜನರಲ್ ತಾಜೇಂದ್ರಸಿಂಹಜಿಯವರು ದ್ವಿತೀಯ ಭಾರತೀಯ ಮಹಾ ಸೇನಾನಿಯಾಗಿ ಅಧಿಕಾರಸ್ವೀಕಾರ ಮಾಡುವರು ತಾವು ನಿವೃತ್ತರಾದರೂ ಈವರೆಗಿನ ಸೇವೆಯನ್ನು ಸಲ್ಲಿಸಲು ಸಿದ್ಧರೆಂದು ಕಾರ್ಯಪ್ಪನವರು ಮದ್ರಾಸಿನಲ್ಲಿ ನುಡಿದರು. ಅಂಥೆ ಚೇಟುಗಳನ್ನು ಸಂಗ್ರಹಿಸುವ ರಚನಾತ್ಮಕ ಉದ್ಯೋಗವು ಕಾರ್ಯಪ್ಪನವರ ಅಭ್ಯಾಸವಾಗಿರುವುದು.

ತೇಜೋವಂತರೂ, ಪರಾಕ್ರಮಿಗಳೂ, ಆದರ್ಶಜೀವಿಗಳೂ, ನಾಡಿನ ಕೀರ್ತಿಯನ್ನು ದಿಗ್ದಿಗಂತಗಳಲ್ಲಿ ಹರಡಿದ ಕೊಡಗಿನ ಸುಪುತ್ರರೂ ಆದ ಜ|| ಕಾರ್ಯಪ್ಪನವರ ದಿವ್ಯವಾದ ಆದರ್ಶದಲ್ಲಿ ನಾಡಿನ ಜನತೆ ಮೈವೆಡೆದು ಭಾರತದ ಭದ್ರತೆಯನ್ನು ಕಾಪಾಡಿ ಸ್ವತಂತ್ರ ಭಾರತವನ್ನು ಪಬಲ ತವರಾಷ್ಟ್ರವಾಗಿ ಮೂಡಲು ದೃಢಸಂಕಲ್ಪ ಮಾಡಿಕೊಳ್ಳಬೇಕು. ಭಾರತದ ವಿದ್ಯಾರ್ಥಿವೃಂದವಾದರೋ ರಾಷ್ಟ್ರಜೀವನದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಗಳಿಸಿರುವ ಕಾರ್ಯಪ್ಪನವರ ಮೇಲ್ಪಕ್ತಿಯಿಂದ ಎಚ್ಚೆತ್ತು ರಾಷ್ಟ್ರದೇವಿಯನ್ನು ನಾನಾ ಕ್ಷೇತ್ರಗಳಿಂದ ಅರ್ಚಿಸಲು ತಮ್ಮತ್ತ ತಾವು ಸಿದ್ಧಪಡಿಸಿಕೊಳ್ಳಬೇಕು. ಸ್ವತಂತ್ರ ಭಾರತದ ಪ್ರಥಮ ಸೇನಾನಿ ಜ|| ಕಾರ್ಯಪ್ಪನವರು ಚಿರಕಾಲ ಬಾಳಿ ತಮ್ಮ ಅಮೂಲ್ಯ ಸೇವೆಯನ್ನು ರಾಷ್ಟ್ರಕ್ಕೆ ಸಲ್ಲಿಸಿ ರಾಷ್ಟ್ರಿಯ ಉನ್ನತಿಗಾಗಿ ಹಿಣಗುವಂತೆ ಅವರಿಗೆ ಭಗವಂತನು ಆಯುರಾರೋಗ್ಯ ಐಶ್ವರ್ಯಗಳನ್ನು ಕೊಟ್ಟು ಹರಸಲಿ!!!

"ಜೈಹಿಂದ್"

ರಾಮಾಯಣ ಮಹಾ ಗ್ರಂಥ.

ಲೇ:—ಶ್ರೀ ಪಿ ಜಿ. ಐಯ್ಯಪ್ಪ, ಮಡಿಕೇರಿ.

ರಾಷ್ಟ್ರದಲ್ಲಿ ಐಕ್ಯಮತ್ಯವನ್ನು ಸ್ಥಾಪಿಸಿ ಇಡೀ ದೇಶದಲ್ಲಿ ವಾಸಿಸುವ ಎಲ್ಲಾ ಜನರಲ್ಲಿ ಸ್ವದೇಶ ಭಾವನೆ ಮತ್ತು ಪ್ರೀತಿಯಂಥ ಗುಣಗಳು ಮೂಡುವ ಸಾಧನೆಗಳು ಅನೇಕವಿರುತ್ತವೆ. ಇವು ಒಂದೊಂದು ದೇಶದಲ್ಲಿ ಒಂದೊಂದು ವಿಧವಾಗಿರುತ್ತವೆ. ಉದಾಹರಣೆಗಾಗಿ ಹೇಳುವದಾದರೆ ಇಂಗ್ಲೆಂಡಿನಲ್ಲಿರುವ ಎಲ್ಲಾ ಜನರಿಗೆ ನಾವು ಒಂದೇ ರಾಷ್ಟ್ರದ ಜನರು ಎಂಬ ಭಾವನೆಯನ್ನು ಬಲವಾಗಿ ಸ್ಥಿರಪಡಿಸುವ ಒಂದು ಪ್ರಾಮುಖ್ಯ ವಸ್ತುವೆಂದರೆ ಅವರ ಅರಸರು. 'ನಾವೆಲ್ಲರೂ ಎಲಿಜಬೆತ್ ರಾಣಿಯ ಪ್ರಜೆಗಳ' ಎಂದೊಡನೆ ಅವರೆಲ್ಲರೂ ಒಂದೇ ಕುಟುಂಬದವರು ಎಂಬ ಭಾವನೆಯು ಅವರಲ್ಲಿ ಸಹಜವಾಗಿಯೇ ಹುಟ್ಟುವುದು. ಆ ಭಾವನೆಯು ಅವರ ರಾಷ್ಟ್ರ ಪ್ರೇಮವನ್ನು ಬಹಳವಾಗಿ ಹೆಚ್ಚಿಸುತ್ತದೆ. ಇವರ ಜತೆಗೆ ಅವರಿಲ್ಲರೂ ಆಡುವ ಭಾಷೆ ಸಹ ಒಂದೆ.

ಇದೇ ರೀತಿಯಲ್ಲಿ ಒಂದೊಂದು ದೇಶದಲ್ಲಿ ಒಂದೊಂದು ಪ್ರಾಮುಖ್ಯ ವಿಷಯಗಳು ಆಯಾ ದೇಶದ ಜನರಲ್ಲೆಲ್ಲಾ 'ಒಂದು ಜನಾಂಗ' ಎಂಬ ಭಾವನೆಯನ್ನು ಹುಟ್ಟಿಸಲಕ್ಕೆ ಸಾಧಕಗಳಾಗಿರುತ್ತವೆ. ಇಂತಹ ಒಕ್ಕೂಡಿಸುವ ಪ್ರಾಮುಖ್ಯ ವಿಷಯವು ರಾಷ್ಟ್ರದ ಎಲ್ಲಾ ಜನರಿಗೂ ಸಂತಸವಾದ ಹಕ್ಕಿಗಳಿಕೆಗೆ ವಸ್ತುವಾಗಿರಬೇಕು. ಮತ್ತು ಆ ವಸ್ತು ಯಾ ವಿಷಯವನ್ನು 'ಇದನ್ನಾದರೂ' ಎಂಬುದಾಗಿ ಒಬ್ಬನು ಒಪ್ಪಿಕೊಳ್ಳುವುದು ಅವನಿಗೆ ಹೆಮ್ಮೆಯನ್ನು ಹುಟ್ಟಿಸಲಕ್ಕೆ ಸಂತೋಷವನ್ನು ಕೊಡಲಕ್ಕೆ ವಸ್ತುವಾಗಿರಬೇಕು.

ನಮ್ಮ ಭಾರತದಲ್ಲಿ ಅನೇಕ ಭಾಷೆಗಳಿದ್ದರೂ ಅನೇಕ ಪ್ರಾಂತ್ಯಗಳಿಂದ ಕೂಡಿರುವ ರಾಷ್ಟ್ರವಾದುದರಿಂದ ನಮ್ಮೊಳಗೆ ಐಕ್ಯಮತ್ವವು ಸ್ಥಾಪನೆಯಾಗಿ ನಾವೆಲ್ಲರೂ 'ಒಂದು ಜನಾಂಗದವರು' ಎಂಬ ಭಾವನೆಯು ಬಲವಾಗಿ ಬೇರೂರಬೇಕಾದರೆ ನಮ್ಮಲ್ಲಿ ನಮ್ಮನ್ನೆಲ್ಲಾ ಒಂದುಗೂಡಿಸುವ ಶಕ್ತಿ ಇರಬೇಕು ಮತ್ತು ಎಲ್ಲರಿಗೂ ವಿಕೇತಿಯಲ್ಲಿ ಅನ್ವಯಿಸಬೇಕು ವಿಷಯಗಳು ವಸ್ತುಗಳನ್ನು ನಾವು ಬಹಳವಾಗಿ ಜನರಂಜಕವಾಗಿ ಮಾಡಲು ಪ್ರಯತ್ನಿಸಬೇಕು. ಇಂತಹ ಸಾಧಕಗಳಲ್ಲಿ ಪ್ರಾಮುಖ್ಯವಾದವು — ಸಾರ್ವಜನಿಕ ಭಾಷೆ ಮತ್ತೆ ಸಂಸ್ಕೃತಿ ಎಂದರೆ ನಮ್ಮ ಪುರಾತನ ಗ್ರಂಥಗಳಲ್ಲಿ ಅಡಕವಾಗಿರುವ ನಮ್ಮ ವಿದ್ಯೆಯು ಮತ್ತು ನಾಗರೀಕತೆಯು ಮಟ್ಟಿಗೆಂದು ಹೇಳಬೇಕಾಗಿಲ್ಲ ನಾನು ಒಬ್ಬ ಪಂಜಾಬಿ, ನಾನೊಬ್ಬ ಬಂಗಾಳಿ, ನಾನೊಬ್ಬ ಮದ್ರಾಸಿ ಎಂಬ ಭಿನ್ನಭೇದದ ಮಾತಾಡುವವರೆಲ್ಲ 'ರಾಮಾಯಣ ಯಾ ಭಾರತ ಎಂತಹ ಮಹತ್ತರವಾದ ಗ್ರಂಥ' ಎಂದೊಡನೆ 'ಆ ಗ್ರಂಥಗಳು ನಮ್ಮವು' ಎಂದು ಹೆಮ್ಮೆಯ ಮುಗುಳುನಗೆಯೊಡನೆ ಒಪ್ಪಿಕೊಳ್ಳುತ್ತೇವೆ. ಹೇಗೆ 'ಶೇಕ್ಸ್‌ಪಿಯರ್' ಎಂದೊಡನೆ ಪ್ರತಿಯೊಬ್ಬ ಆಂಗ್ಲೇಯನು ಹೆಮ್ಮೆಯಿಂದ 'ಅವನು ನಮ್ಮ ಕವಿ' ಎಂದು ಹೇಳುತ್ತಾನೋ, ತದೋಪರೀತಿಯಲ್ಲಿ 'ರಾಮಾಯಣ', 'ಮಹಾಭಾರತ' ಎಂದೊಡನೆ ಪ್ರತಿಯೊಬ್ಬ ಭಾರತೀಯನೂ ಉತ್ತರ ಹಿಂದೂಸ್ಥಾನದವನೇ ಆಗಲೀ, ದಕ್ಷಿಣ ಹಿಂದೂಸ್ಥಾನದವನೇ ಆಗಲಿ, ಆ ಗ್ರಂಥಗಳು ನಮ್ಮವು ಎನ್ನುತ್ತಾನೆ; ಅಷ್ಟೇ ಅಲ್ಲದೆ ಆ ಕೂಡಲೇ ತನ್ನಲ್ಲಿರುವ ಸಂಕುಚಿತ ರಾಷ್ಟ್ರಭಾವನೆಯನ್ನು ಮರೆತು ನಾವೆಲ್ಲ ಒಂದೇ ಎಂಬ ಭಾವನೆಯನ್ನು ಆ ಕೂಡಲೇ ಅತ್ಯ ಸಂತೋಷದಿಂದ ಹೊರಗೆಡಹುತ್ತಾನೆ. ಲೋಕಪ್ರಸಿದ್ಧವಾದ ಈ ಗ್ರಂಥಗಳನ್ನು ಯಾರು ತಾನೆ ತನ್ನದೆನ್ನದಿರುವರು? ನಾವೆಲ್ಲರೂ ಭಾರತೀಯ ಕುಟುಂಬಕ್ಕೆ ಸೇರಿದ ಒಂದು ಜನಾಂಗದವರು ಎಂಬ ಭಾವನೆಯನ್ನು ಹುಟ್ಟಿಸತಕ್ಕ ಮಹೆತ್ ಪ್ರಭಾವವು ಈ ನಮ್ಮ ಗ್ರಂಥಗಳಿಗಿವೆ.

ಅಷ್ಟೇ ಅಲ್ಲ; ರಾಮಾಯಣವೆಂದರೆ ಮುದ್ದಣ್ಣ ಕವಿಯು ಹೇಳಿದಂತೆ 'ಉಳಿದೊಡಂ ಅಳಿದೊಡಂ ಬಟ್ಟಿದೋರಿಪ' ಗ್ರಂಥವೇ ಆಗಿದೆ. ಇದರಲ್ಲಿ ಪಾತ್ರವಹಿಸಿರುವವರೆಲ್ಲಾ ತಮ್ಮ ಜೀವನವನ್ನು ಲೋಕಕ್ಕೆಲ್ಲಾ ಮಾರ್ಗದರ್ಶಿಗಳಾಗುವಂತೆ ನಿರ್ವಹಿಸಿ ಪೂರೈಸಿದ್ದಾರೆ. ರಾವಣನ ರಾಜ್ಯಭಾರ ಕ್ರಮ, ಪಿತೃ ಭಕ್ತಿ, ದೇಶ ಪ್ರೇಮ, ಸತ್ಯಶುದ್ಧತೆ, ಧರ್ಮ ಪರಿಪಾಲನೆ ಮತ್ತು ಶೌರ್ಯ ಸಾಹಸಗಳು ಲೋಕಕ್ಕೇ ಮೇಲ್ಪಂಕ್ತಿಗಳಾಗಿವೆ. ಸೀತಾದೇವಿಯ ಪಾತಿವ್ರತ್ಯವೆಂಬುದು ಮಾನವ ಕೋಟಿಗೆ ಅವರ್ಣನೀಯವಾದುದು ಎಂದರೆ ಯಾರೂ ಅದನ್ನು ಅತಿಶಯೋಕ್ತಿ ಎನ್ನಲಾರರು. ಅದೇ ರೀತಿಯಲ್ಲಿ ಭರತ ಲಕ್ಷ್ಮಣರ ಭ್ರಾತೃಪ್ರೇಮವೂ, ಆಂಜನೇಯನ ಸ್ವಾಮಿ ಭಕ್ತಿಯೂ, ಸುಗ್ರೀವ, ವಿಭೀಷಣರ ಮಿತ್ರಪ್ರೇಮವೂ ಎಲ್ಲರಿಗೂ ಮೇಲ್ಪಂಕ್ತಿಯಾಗಿವೆ.

ಮನುಷ್ಯ ಸ್ವಭಾವವು ಒಂದೊಂದು ಕಾಲಕ್ಕೆ ಒಂದೊಂದು ರೀತಿಯಾಗಿರುವುದು ಸಹಜ. ಆದರೂ ಕಾಲಗಳಲ್ಲಿ, ಆ ಗಣದಲ್ಲಿ ಮುಂದುಮುಂದು ಪರಿಪೂರ್ಣತೆಯನ್ನು ಪಡೆಯುವುದೇ ಎಲ್ಲರಲ್ಲಿಯೂ ಕಂಡು ಬರುವ ಗುರಿಯಾಗಿರುತ್ತದೆ. ಈ ಕಾಲದಲ್ಲಿ ಭೌತಿಕ ಶಾಸ್ತ್ರವನ್ನು ಊರ್ಜಿತಗೊಳಿಸಿ ನಾನಾ ತರದ ಯಂತ್ರಗಳನ್ನು ಕಂಡು ಹಿಡಿದು ಅತಿ ಮಹತ್ತರವಾದ ಕಾರ್ಯಗಳನ್ನು ಅತ್ಯಲ್ಪ ಕಾಲದಲ್ಲಿ ಸಾಧಿಸಬೇಕೆಂಬ ದೃಷ್ಟಿಯಿಂದ ಎಲ್ಲಾ ವಿಧದಲ್ಲಿಯೂ ವೇಗವನ್ನು ಹೆಚ್ಚಿಸುವದೇ ಈಗಿನ ಕಾಲದ ಗುರಿಯಾಗಿದೆ. ಈ ಗುರಿಯು ಪೈಪೋಟಿಯು ಬರೀ ಆರ್ಥಿಕ ಹಂದಾಟಗಳಲ್ಲಿ ಮಾತ್ರ ಕಂಡುಬಾರದೆ, ನಮ್ಮ ಜೀವನದ ಎಲ್ಲಾ ಉದ್ಯೋಗ ಮತ್ತು ಪ್ರಯತ್ನಗಳಲ್ಲೂ ಕಂಡು ಬರುತ್ತಿದೆ. ಹಾಗೆಯೇ ಆ ಜಾಡ್ಯವು ನಮ್ಮ ವಿದ್ಯಾರ್ಜನೆಯಲ್ಲೂ ತಲೆದೋರಿದ ಕಾರಣ ನಮ್ಮ ಪೂರ್ವಜರು ಜನರ ತಿಳುವಳಿಕೆಗಳನ್ನು ನಾನಾ ರೀತಿಯಲ್ಲಿ ಬೆಳೆಯಿಸುವ ದೃಷ್ಟಿಯಿಂದ ಬಹಳ ವಿಸ್ತಾರವಾಗಿ ಬರೆದ ಗ್ರಂಥಗಳನ್ನು ಸಂಕ್ಷೇಪಿಸಿ ಬರೆಯಲು ತೊಡಗಿದೆವು. ಇದರ ಫಲಿತಾಂಶವಾಗಿ ಪೂರ್ವಜರು ಯಾವ ದೃಷ್ಟಿಯಿಂದ ಅಂತಹ ಮಹಾ ಕಾವ್ಯಗಳನ್ನು ಬರೆದರೋ ಆ ಪ್ರಾಮುಖ್ಯ ಗುರಿಯೇ ಬದಿಗೊತ್ತಲ್ಪಟ್ಟು ಬರೀ ಕಥಾಸಾರಾಂಶಕ್ಕೇ ನಾವು ಪ್ರಾಮುಖ್ಯತೆಯನ್ನು ಕೊಡಲು ತೊಡಗಿದೆವು. ಆದುದರಿಂದ ಎಷ್ಟೋ ಲೆಕ್ಷ ಶ್ಲೋಕಗಳಿಂದ ಕೂಡಿದ ರಾಮಾಯಣವು ಸಣ್ಣ ಪುಸ್ತಕ ರೂಪದಿಂದ ಹೊರಬೀಳತೊಡಗಿತು. ಆದರಲ್ಲಿ ಬರೀ ಕಥೆಯು ಅಡಕವಾಯಿತೇ ಹೊರತ, ಆದರಲ್ಲಿ ಅಡಕವಾಗಿದ್ದ ಬುದ್ಧಿವಾದಗಳೂ, ಬೋಧನೆಗಳೂ ಮತ್ತಿತರ ತಿಳುವಳಿಕೆಗಳೂ ಮಾಯವಾದವು. ಬರೀ ಕಥೆಯಿಂದ ಏನೋಂದೂ ಪ್ರಯೋಜನವಿಲ್ಲವೆಂದೇ ಹೇಳಬೇಕು. ಯಾಕೆಂದರೆ ಈಗಿನ ಭೌತಿಕ ತಿಳಿವಳಿಕೆಯ ಪ್ರಭಾವಕ್ಕೆ ಮರುಳಾದ ನಮಗೆ ಈ ಕಥೆಯೋ ಒಂದು ತರದ ಅಜ್ಜಿಕಥೆಯಂತೆ ಕಾಣುತ್ತದೆ. ಆದುದರಿಂದ ವಿದ್ಯಾಂತರಿಂದನ್ನಿಸಿಕೊಳ್ಳುವ ಈಗಿನ ಯುವಕರಾದಿ ಈ ನಮ್ಮ ಪುರಾತನ ಗ್ರಂಥಗಳನ್ನು ಓದುವುದೇ ಇಲ್ಲ. ಈ ತರದ ಅಸಂಧಿಗ್ಧತೆ ಹುಟ್ಟುವುದಕ್ಕೆ ಮುಖ್ಯ ಕಾರಣವೆಂದರೆ—ನಮ್ಮ ವಿದ್ಯಾ ಇಲಾಖೆಯವರು ಈ ಗ್ರಂಥಗಳ ಮೂತ್ಯಕೆಗಳನ್ನು ಪ್ರಚುರ ಪಡಿಸದೆ, ಅವುಗಳ ಸಂಕ್ಷಿಪ್ತ ಕಥಾವಳಿಗಳಿಗೆ ಉತ್ತೇಜನ ಕೊಡುತ್ತಾ ಬಂದದ್ದು. ಇದರ ಫಲಿತಾಂಶವಾಗಿ ನಮ್ಮ ದೇಶಪ್ರೇಮವೂ, ಸಂಸ್ಕೃತಿಯೂ ಬಹಳ ಮಟ್ಟಿಗೆ ಹೀನ ಮಟ್ಟಕ್ಕೆ ಇಳಿದು ಹೋಗಿದೆ.

ಸಂಸ್ಕೃತದಲ್ಲಿರುವ ವಾಲ್ಮೀಕಿ ರಾಮಾಯಣವನ್ನೂ, ವ್ಯಾಸ ಭಾರತವನ್ನೂ ಅಥವಾ ಇವುಗಳ ಸರಿಯಾದ ತರ್ಜುಮೆಗಳನ್ನು ಎಲ್ಲರೂ ಓದುವ ಅನುವನ್ನು ಎಷ್ಟು ಬೇಗ ನಾವು ಜನಸಮೂಹಕ್ಕೆ ಕಲ್ಪಿಸಿಕೊಡುತ್ತೇವೋ ಅಷ್ಟೇ ತ್ವರೆಯಿಂದ ನಮ್ಮ ದೇಶಪ್ರೇಮವನ್ನೂ ಮತ್ತು ಸಂಸ್ಕೃತಿಯನ್ನೂ ಮುಂದುವರಿಸಬಹುದು.

ಡೀನ್ ಇಂಜ್ ಎಂಬವನು ರಾಷ್ಟ್ರ ಪ್ರೇಮ ವೆಂಬುದನ್ನು ಹೀಗೆ ವಿವರಿಸುತ್ತಾರೆ. Petriotism means–pride in the past and ambition for the future' ಹಿಂದಿನ ಸಂಸ್ಕೃತಿಯಲ್ಲಿ ಹೆಮ್ಮೆಯೇ ಮುಂದಿನ ಅಭಿವೃದ್ಧಿಯನ್ನು ಹೆಚ್ಚಿಸುವ ಕಾಂಕ್ಷೆಯ ತಳಹದಿಯಾಗಿರುವಾಗ್ಯೆ ನಾವು ನಮ್ಮ ಪೂರ್ವದ ನಾಗರಿಕತೆಯನ್ನು ತಿಳಿಯದಿದ್ದರೆ ನಮಗೆ ಮುಂದವರಿಯಬೇಕೆಂಬ ಮಹಾ ಕಾಂಕ್ಷೆಯು ಹುಟ್ಟುವುದಾದರೂ ಹೇಗೆ?

ನಮ್ಮ ರಾಮಾಯಣ ಮಹಾಭಾರತ ಗಳಲ್ಲಿ ಅಡಕವಾಗದ ತಿಳುವಳಿಕೆಯೇ ಇಲ್ಲವೆಂದು ಧೈರ್ಯವಾಗಿ ಹೇಳಬಹುದು. ನಮ್ಮ ಪೂರ್ವಜರ ತಿಳುವಳಿಕೆ ಮತ್ತು ನಾಗರಿಕತೆಯು ಎಷ್ಟರಮಟ್ಟಿಗೆ ಮುಂದುವರಿದಿತ್ತು ಎಂಬದನ್ನು ನಾವು ಈ ಎರಡು ಗ್ರಂಥಗಳ ಮೂತ್ಯಕೆಗಳನ್ನು ಓದಿದರೆ ಅರ್ಥವಾಗುತ್ತದೆ.

ರಾಮಾಯಣದಲ್ಲಿ ಅಲ್ಲಲ್ಲಿ ಚಿನ್ನ, ಬೆಳ್ಳಿ, ಉಕ್ಕು, ತಾಂಬ್ರ, ಹಿತ್ತಾಳೆ ಮುಂತಾದ ಲೋಹಗಳ ಹೆಸರುಗಳು ಇರುವುದರಿಂದ ವಾಲ್ಮೀಕಿಯು ಕ್ರಿ.ಪೂ.ಕಿಂತಲೂ ಮೊದಲೇ ಈ ಲೋಹಗಳ ಉಪಯೋಗ ನಮ್ಮ ದೇಶದಲ್ಲಿತ್ತೆಂಬುದು ವಿದಿತವಾಗುತ್ತದೆ. ಅಲ್ಲದೆ ವಜ್ರ ವೈಡೂರ್ಯಗಳು ಮುತ್ತು ರತ್ನ ಇತರ ನಾನಾ ತರದ ರತ್ನಗಳ ಹೆಸರು ಅಲ್ಲಲ್ಲಿ ಬರುತ್ತವೆ. ಹಾಗೆಯೇ ಧಮ್ಮ ಉಡುಪುಗಳ ವಿಶಯ ಬರುವಾಗ ಜರತಾರಿ, ನಾರು ಮಡಿ ಮುಂತಾದ ಹೆಸರುಗಳು ಅಲ್ಲಲ್ಲಿ ಬರುತ್ತವೆ.

ಇಷ್ಟೇ ಅಲ್ಲ, ಭರದ್ವಾಜರ ಆಶ್ರಮದಲ್ಲಿ ಭರತನ ಸೈನ್ಯಕ್ಕೂ ಮತ್ತು ಜನರಿಗೂ ಔತಣ ಕೊಟ್ಟಾಗ ಅಲ್ಲಿ ವಿವರಿಸಿರುವ ನಾನಾ ಪಾಕಗಳಲ್ಲಿ ಎಲ್ಲಾ ತರದ ಪೂರಿಸ ಮತ್ತು ತರಕಾರಿಯ ಭಕ್ಷ್ಯಗಳು ಕಂಡು ಬರುವುದಲ್ಲದೆ ಅನೇಕ ಶಬ್ದ ಪದ್ಯಗಳ ಹೆಸರುಗಳು ಸಹ ಬರೆಯಲ್ಪಟ್ಟಿವೆ. ಇದರಿಂದ ಎಲ್ಲಾ ವಿಧದಲ್ಲೂ ಅನಾದಿಕಾಲದಲ್ಲಿ ಸಂಪೂರ್ಣ ಮುಂದುವರಿದಿದ್ದರು ಎಂದು ವಿದಿತವಾಗುತ್ತದೆ.

ಅಲ್ಲಲ್ಲಿ ನಾನಾ ರೀತಿಯ ಯುದ್ಧ ಆಯುಧಗಳ ಹೆಸರೂ, ಹೊಡೆದ ಹೆಸರೂ ಬರುತ್ತದೆ. ಅಂಜನೆಯನು ಲಂಕಾ ನಗರಿ ದಹನ ಮಾಡಿದ ಮೇಲೆ ರಾವಣನ ಕೋಟೆಯ ಮಂತ್ರಿ ಸೈನ್ಯದ ಬಲಾಬಲಗಳನ್ನು ರಾವಣನಿಗೆ ವಿವರಿಸುವ ಸಂದರ್ಭದಲ್ಲಿ ಆ ಕೋಟೆಯ ಸುತ್ತಲೂ ನಿರ್ಮಿಸಲ್ಪಟ್ಟಿರುವ ಅಗಳ ಮತ್ತು ಆಳವಾಗಿಯೂ ದುಷ್ಟ ಜಲಪ್ರಾಣಿಗಳಿಂದ ಸಹಿಸಲಸಾಧ್ಯವಾಗಿಯೂ ಇರುವುದಲ್ಲದೆ ಅಲ್ಲಲ್ಲಿ ಅಂತಹ ಕಂದಕಗಳನ್ನು ದಾಟಲು ಕಾಣಾಗಿಯೇ ಚಾಚಿರುವ ಮತ್ತು ಹಿಂದಕ್ಕೆ ಎಳೆದು ಬಾಗಿಕೊಳ್ಳುವ ಸೇತುವೆಗಳೂ ಅಲ್ಲಲ್ಲಿವೆ ಎಂದು ಹೇಳುತ್ತಾನೆ. ಅಷ್ಟೇ ಅಲ್ಲದೆ ಅಂತಹ ಕಂದಕಗಳ ಒಳಭಾಗದಲ್ಲಿ ಕಟ್ಟಿರುವ ಎತ್ತರವಾದ ಗೋಡೆಯ ಮೇಲೆ ತಾವಾಗಿಯೇ ಶತ್ರುಗಳನ್ನು ಹೊಡೆಯುವಂತಾ ಯಾಂತ್ರಿಕ ಆಯುಧಗಳೂ ಅಲ್ಲಲ್ಲಿವೆ ಎಂಬುವುದರಿಂದ ಏಟಿಗೆ ಏಟು ಕೊಡುವ ಆಯುಧಗಳಿಗೆ ಸರಿಹೋಲುವ ಆಯುಧಗಳೂ ಸಹ ಆಗಿನ ಕಾಲದಲ್ಲೂ ಇದ್ದವು ಎಂಬುವುದು ವಿಷದವಾಗುತ್ತದೆ.

ಇದಲ್ಲದೆ ಹೆಂಗಸರ ಧರ್ಮ ಹೇಗಿರಬೇಕೆಂಬುದನ್ನು —ಅನಸೂಯ ದೇವಿಯು ಸೀತೆಗೆ ಕೊಟ್ಟ ಉಪದೇಶದಿಂದಲೂ ರಾಜನ ಧರ್ಮ ಹೇಗಿರಬೇಕೆಂಬುದನ್ನು ರಾವಣನು ಭರತನನ್ನು ಕೇಳಿದ ಪ್ರಶ್ನೆಗಳಿಂದಲೂ ರಾಜ್ಯತಂತ್ರ ಹೇಗಿರಬೇಕೆಂಬುದನ್ನು ವಿಭೀಷಣ, ಕುಂಭಕರ್ಣ ಮತ್ತು ರಾವಣನ ಮಂತ್ರಿಗಳು ರಾವಣನಿಗೆ ಹೇಳಿದ ಬುದ್ಧಿವಾದದಿಂದಲೂ ನಾವು ತಿಳಿಯಬಹುದು.

ಅಷ್ಟೇ ಅಲ್ಲ; ಈಗ ಎಲ್ಲ ಮುಂದಾಳುಗಳ ಬಾಯಿಯಲ್ಲೂ ವಾಡಿಕೆಯಾಗಿ ಬರುವ 'ರಾಮರಾಜ್ಯ' ವೇನೆಂಬುದನ್ನು ಈ ಮೂತ್ಯಕೆಗಳನ್ನು ಓದಿದರೆ ಮೂತ್ಯ ನಮಗೆ

(ಮುಂದಿನ ಪುಟ ನೋಡಿ)

ಕೊಡಗು

ತಾ. ೨೯-೮-೧೯೫೨ನೇ ಶುಕ್ರವಾರ

ಕಾಲೋಚಿತ ಸಲಹೆಗಳು.

ಸ್ವಾತಂತ್ರ್ಯ ಹಿಂದೂದೇಶದ ಪ್ರಥಮ ಮುಖ್ಯ ಸೇನಾಧಿಪತಿಯೂಗಿ ಕೊಡಗಿನ ಕೀರ್ತಿಯನ್ನು ಇಡೀ ಭಾರತ ಭೂಮಿಯ ಹಾಗೂ ಪ್ರಪಂಚದ ಎಲ್ಲಾ ಭಾಗಗಳಿಗೆ ಹರಡಿದ ಜನರಲ್ ಕಾರ್ಯಪ್ಪನವರು ೧೯೫೩ನೇ ಜನವರಿಯಲ್ಲಿ ತಮ್ಮ ಹುದ್ದೆಯಿಂದ ನಿವೃತ್ತರಾಗಲಿರುವರು. ಇಹರು ತಮ್ಮ ಈಗಿನ ಉದ್ಯೋಗದಲ್ಲಿ ಕೊಡಗಿನ ಆಖೈರು ಪ್ರವಾಸವನ್ನು ಈ ತಾ. 23ರಿಂದ ೩೦ರ ವರೆಗೆ ನಡಿಸಿದರು. ಈ ಪ್ರವಾಸದಲ್ಲಿ ಇವರು ಮಾಡಿದ ಕೆಲವು ಭಾಷಣಗಳಲ್ಲಿ ತನ್ನ ಮೂತೃಭೂಮಿಯೂದ ಕೊಡಗಿನ ಏಳಿಗೆಗೆ ಬಹು ಉಪಯುಕ್ತವಾದ ಸಲಹೆ ಸೂಚನೆಗಳನ್ನು ಕೊಟ್ಟಿರುವರು. 'ಸಾಹೂನ್ಯ ಜನರಿಗೆ ದಿವಸಕ್ಕೆರಡು ಹೊತ್ತು ಅನ್ನ, ಮೈ ಮುಚ್ಚಲು ಬಟ್ಟೆ ಮತ್ತು ಉಳಕೊಳ್ಳಲು ಮನೆ' ಇರುವ ನಮ್ಮ ಈ ಸುಂದರವಾದ ಚಿಕ್ಕ ಪ್ರಾಂತ್ಯವನ್ನು ಹೀಗೆಯೇ ಪ್ರತ್ಯೇಕವಾಗಿಟ್ಟುಕೊಂಡು, ಈಗ ದೊರೆತಿರುವ ಜವಾಬ್ದಾರಿ ಸರ್ಕಾರವನ್ನು ಎಲ್ಲರ ಸಹಕಾರದಿಂದ ಜಯಪ್ರದವಾಗಿ ನಡಿಸಿ, ಇಡೀ ಹಿಂದೂದೇಶಕ್ಕೊಂದು ಮಾದರಿ ಪ್ರಾಂತ್ಯವಾಗಬೇಕೆಂಬ ಇವರ ಸಲಹೆಯು ಇವರ ನಿಸ್ಸೀಮ ದೇಶಭಕ್ತಿಯನ್ನೂ, ವಿಶಾಲ ಅನುಭವವನ್ನೂ ಪ್ರದರ್ಶಿಸುತ್ತದೆ. ಬಹು ಕಾಲೋಚಿತವಾದ ಈ ಸಲಹೆಯ ಮೇಲೆ ಹೆಚ್ಚಿನ ಪ್ರಸಂಶೆ ಯಾ ಟೀಕೆ ಟಿಪ್ಪಣಿಗಳ ಅವಶ್ಯವಿಲ್ಲ

ದೇಶದ ಅಭಿವೃದ್ಧಿಯೆಂದರೆ ಮುಂದಿನ ಜನಾಂಗದ ಅಭಿವೃದ್ಧಿಯೆಂದು ಚೆನ್ನಾಗಿ ಅರಿತಿರುವ ಇವರಿಗೆ ವಿದ್ಯಾರ್ಥಿಗಳ ಮೇಲೆ ಬಹು ಪ್ರೇಮ. ಇವರು ಕಾಲೇಜಿನ ವಿದ್ಯಾರ್ಥಿಗಳಿಗೆ ಕೊಟ್ಟ ಭಾಷಣದಲ್ಲಿ ಅವರ ಏಳಿಗೆ ಬಗ್ಗೆ ಉತ್ಕೃಷ್ಟ ಸಲಹೆಗಳನ್ನು ಕೊಟ್ಟಿರುವರು. ಚಿತ್ತವನ್ನು ಇಟ್ಟುಕೊಂಡು, ದುಕ್ಕಟ ಬಿಟ್ಟು, ಶಾರೀರಿಕ ಹಾಗೂ ಮಾನಸಿಕ ಯೋಗ್ಯತೆಯನ್ನು ಗಳಿಸಿರಿ' ಎಂಬುದೇ ಇವರ ಸಂದೇಶದ ಮುಖ್ಯ ತಾತ್ಪರ್ಯ. ವಿದ್ಯಾರ್ಥಿ ವರ್ಗದವರು ಮತ್ತು ಅಧ್ಯಾಪಕರು ಇದನ್ನು ಪೂರ್ಣ ಪರಿಪಾಲಿಸುವರಾಗಿ ಆಶಿಸುತ್ತೇವೆ. ಇದನ್ನು ಸಾಧಿಸಲು ಅತ್ಯವಶ್ಯವಾದ ಯೋಗ್ಯ ವಿದ್ಯಾರ್ಥಿ ವಸತಿಗೃಹ, ಆಟದ ಮೈದಾನ, ಕಸರತ್ತು ವ್ಯವಸ್ಥೆ ಮೊದಲಾದುವುಗಳ ಈಗಿನ ಕೊರತೆಯನ್ನು ಇವರು ಮುಚ್ಚು ಮರೆ ಇಲ್ಲದೆ ತೋರಿಸಿರುವರು. ಸ್ವಚ್ಛ ಮನಸಿನ ಈ ಸೂಚನೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೆ ಗಮನಕೊಟ್ಟು, ಕೊಡಗಿನ ಕಾಲೇಜನ್ನು ಆದರ್ಶ ಕಾಲೇಜಾಗಿ ಮಾಡಲು ಸಹಾಯಕರಾಗುವರೆಂದು ನಂಬುತ್ತೇವೆ.

ವರ್ತಮಾನ

ತಾ. ೨೨ರಿಂದ ಇಂದಿನ ವರೆಗೆ ಮಡಿಕೇರಿಯಲ್ಲಿ ೭ ಇಂಚು ೨ ಸೆಂಟು ಮಳೆಯಾಗಿದೆ. ತಾ. ೨೨ರಲ್ಲಿ ೨ ಇಂಚು ೪೬ ಸೆಂಟು ಮಳೆ ಬಿತ್ತು.

ಇಷ್ಟರ ವರೆಗೆ ಕಿತ್ತಳೆ 'ಹೆಡ್ ರೀಸರ್ಚ್ ವರ್ಕರ್' ಆಗಿದ್ದ, ಶ್ರೀ ಕಾಡುಮಂಡ ಐಯ್ಯಪ್ಪ ಎಂ. ಎಸ್ಸಿ., ಪಿ. ಹೆಚ್ ಡಿ. ಯವರನ್ನು ಈಗ ಕಿತ್ತಳೆ ರೀಸರ್ಚ್ ಆಫೀಸರಾಗಿ (ಗಜೆಟೆಡ್) ನೇಮಿಸಲಾಗಿದೆ.

ಹೊಸ ರೂಲ್ಸ್‌ಗಳ ಮೇರೆ ಕೊಡಲ್ಪಟ್ಟಿರುವ ಯೂಲಕ್ಕಿ ಗೇಣಿ ಪುಲೆಗಳ "ಎ" ತರಗತಿಯ ಜಾಗಕ್ಕೆ ಏಕ್ರೆಗೆ ರೂ. ೫ರಂತೆ ಯೂ, "ಬಿ" ತರಗತಿಯ ಜಾಗಕ್ಕೆ ರೂ. ೪ರಂತೆಯೂ ಕಂದಾಯ ಇತ್ತಲಾಗಿ ನಿಶ್ಚಯಿಸಲ್ಪಟ್ಟಿದೆ.

ಮೂರ್ನಾಡಿನ ಕೈಲ್ ಪೊಳ್ದು ಆಟೋಟಗಳ ಸ್ಪರ್ಧೆಯು ತಾ. ೩೦-೮-೫೨ರಲ್ಲು ನಾಪೋಕ್ಲುನಾಡು ಬೇತುಗ್ರಾಮದ ಕಾಟ್ಟಂಜೆಟ್ಟಿರ ಆಕದಲ್ಲಿ ನಡೆದ ಪಬ್ಲಿಕಿನ ಓಟದ ಸ್ಪರ್ಧೆಯಲ್ಲಿ ಮಡಿಕೇರಿನಾಡಿನ ಶ್ರೀ ಕೊಕ್ಕಲೆರ ಪಿ. ತಿಮ್ಮಯ್ಯನವರು ಮೊದಲನೆಯದಾಗಿ ಬಂದು ಬಹುಮಾನ ಪಡೆದರಾಗಿ ತಿಳಿಯುತ್ತೇವೆ.

ಕ್ಷಯರೋಗನಿವಾರಣೆ ಫಂಡಿನ ಸೀಲುಗಳ ಮೂರಾಟದ ಏರ್ಪಾಡಿನ ಬಗ್ಗೆ ಅದರ ಸೆಂಟ್ರಲ್ ಕಮಿಟಿಯ ಮೀಟಿಂಗೊಂದು ಬರುವ ಸೆಪ್ಟೆಂಬರು ತಾ. ೨ರಲ್ಲಿ ಬೆಳಿಗ್ಗೆ ೧೧ ಗಂಟೆಗೆ ಎಸೆಂಬ್ಲಿ ಹಾಲ್‌ನಲ್ಲಿ ನಡೆಯುವುದೆಂದೂ, ನಂತರ ಸಂಯುಕ್ತ ರಾಷ್ಟ್ರಗಳ ಅಪ್ಪೀಲಿನ ಮೇರೆ ಕೊಡಗಿನಲ್ಲಿ 'ಮುಕ್ಕಳ ದಿನಾಚರಣೆ'ಯ ವ್ಯವಸ್ಥೆಯ ಬಗ್ಗೆ ಅದರ ಕೇಂದ್ರ ಕಮಿಟಿಯ ಮೀಟಿಂಗೊಂದು ಅಲ್ಲಿಯೇ ನಡೆಯುವುದೆಂದೂ ತಿಳಿಯಬರುತ್ತದೆ.

ಈ ತಾ. ೧೫ರಿಂದ 1 ವರ್ಷ ದವರೆಗೆ ಮಡಿಕೇರಿ ಬೆಂಚು ಕೋರ್ಟಿಗೆ ಶ್ರೀ ಕೆ. ಕೆ. ನಂಜಪ್ಪ ಬಿ. ಎ. ಬಿ. ಎಲ್ ರವರನ್ನು ಅಧ್ಯಕ್ಷರಾಗಿಯೂ, ಶ್ರೀ ಕೋದಂಡ ಡಿ. ಬೋಪಯ್ಯನವರು ಮತ್ತು ಶ್ರೀ ಮಹಮದ್ ಹಸೇನ್ ಖಾನರನ್ನು ಮೇಜಿಸ್ಟ್ರೇಟರುಗಳಾಗಿಯೂ, ವಿರಾಜಪೇಟೆ ಬೆಂಚ್ ಕೋರ್ಟಿಗೆ ಕೆ. ಕೆ. ಬೆಳ್ಯಪ್ಪನವರನ್ನು ಅಧ್ಯಕ್ಷರಾಗಿಯೂ, ಶ್ರೀ ಕುಟ್ಟಂಡ ಡಿ. ಅಚ್ಚಪ್ಪನವರನ್ನು ಮತ್ತು ಶ್ರೀ ಪಸಿ ಪಿಂಟೋರವರನ್ನು ಮೇಜಿಸ್ಟ್ರೇಟರುಗಳಾಗಿಯೂ ನೇಮಿಸಲಾಗಿದೆ.

ದಕ್ಷಿಣ ಕನ್ನಡ 'ಕೊಡಗು ಸಂಘ'ದ ವಾರ್ಷಿಕ ಮಹಾಸಭೆಯು ತಾ. ೧೭-೮-೫೨ರಲ್ಲಿ ಶ್ರೀ. ಬೊವ್ವೇರಿಯಂಡ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ನಡೆದು, ಮುಂದಿನ ವರ್ಷಕ್ಕೆ ಶ್ರೀ. 'ಬೊವ್ವೇರಿಯಂಡ ಮುತ್ತಣ್ಣನವರು ಅಧ್ಯಕ್ಷರಾಗಿಯೂ, ಶ್ರೀ. ಬಿ. ವಿ. ರಮಣಯ್ಯನವರು ಉಪಾಧ್ಯಕ್ಷರಾಗಿಯೂ ಶ್ರೀ. ಕೊಂಗೆಟ್ಟಿರ ಉತ್ತಯ್ಯನವರು ಖಜಾಂಜಿಯಾಗಿಯೂ, ಶ್ರೀ. ಮೂದೆಟ್ಟಿರ ಪೂಣಚ್ಚನವರು ಗೌರವ ಕಾರ್ಯದರ್ಶಿಯಾಗಿಯೂ, ಶ್ರೀ. ಕಲಿಯಂಡ ಚಂಗಪ್ಪನವರು ಆಟೋಟಗಳ ಕಾರ್ಯದರ್ಶಿಯಾಗಿಯೂ, ಇತರ ೯ ಜನರು ಕಮಿಟಿ ಮೆಂಬರುಗಳಾಗಿಯೂ ಆರಿಸಲ್ಪಟ್ಟಿರುವರು

ಜನರಲ್ ಕಾರ್ಯಪ್ಪನವರ ಕೊಡಗು ಪ್ರವಾಸ.

ಹಿಂದೂದೇಶದ ಕಮಾಂಡರ್-ಇನ್-ಚೀಫ್‌ರಾದ ಜನರಲ್ ಕೆ ಎಂ. ಕಾರ್ಯಪ್ಪನವರು ಈ ತಾ. ೨೩ರ ಮಧ್ಯಾಹ್ನ ೧೨-೩೦ ಗಂಟೆಗೆ ಮಡಿಕೇರಿಗೆ ಬಂದಾಗ್ಯೆ ಪುರ ನಿವಾಸಿಗಳು ಆಸ್ಪತ್ರೆ ಗೇಟಿನ ಬಳಿ ಅವರಿಗೆ ಸ್ವಾಗತವನ್ನಿತ್ತರು. ಅದೇ ದಿನ ರಾತ್ರಿ ಚೀಫ್ ಕಮಿಷನರವರು ಎಸೆಂಬ್ಲಿ ಹಾಲ್‌ನಲ್ಲಿ ಅವರಿಗೆ ಸರ್ಕಾರಿ ಔತಣವನ್ನು ಕೊಟ್ಟರು. ಸುಮಾರು ೭೦ ಜನರು ಹಾಜರಿದ್ದರು. ತಾ. ೨೪ರಲ್ಲಿ ಅವರಿಗೆ ಕೆಲವು ಕಡೆ ಖಾಸಗಿ ಮಹನೀಯರ ಊಟ ಮತ್ತು ಟೀಪಾರ್ಟಿಗಳ ಏರ್ಪಾಡುಗಳಿದ್ದವು. ತಾ. ೨೫ನೇ ಸೋಮವಾರ ಬೆಳಿಗ್ಗೆ ೧೦ ಗಂಟೆಗೆ ಅವರು ಸೆಂಟ್ರಲ್ ಹೈಸ್ಕೂಲನ್ನು ಸಂದರ್ಶಿಸಿ, ಸೌಟ್ ದಳ ಮತ್ತು ನೇಶನಲ್ ಕೇಡೆಟ್ ಕೋರನ್ನು ಪರಿತೀಲಿಸಿದನಂತರ, ೧೧ ಗಂಟೆಗೆ ಸರ್ಕಾರಿ ಕಾಲೇಜು ಹಾಲ್‌ನಲ್ಲಿ ಸಭೆ ಸೇರಿ ವಿದ್ಯಾರ್ಥಿಗಳಿಗೆ ಉಪನ್ಯಾಸ ಮಾಡಿದರು. ಮಧ್ಯಾಹ್ನ ೧ ಗಂಟೆಗೆ ಮಂತ್ರಿಗಳು ಅಥಿತಿ ಗೃಹದಲ್ಲಿ ಅವರ ಗೌರವಾರ್ಥವಾಗಿ ಏರ್ಪಡಿಸಿದ್ದ ಔತಣದಲ್ಲಿ ಭಾಗ ವಹಿಸಿದರು. ಅದೇ ದಿನ ಸಾಯಂಕಾಲ ೪-೩೦ ಗಂಟೆಗೆ ತಿತಿಮತಿಗೆ ಹೋಗಿ, ಶ್ರೀ ಮನೆಯಪಂಡ ಗಣಪತ್ತಿಯವರು ಅವರ ಮೂತಾ ಪಿತೃಗಳ ಸ್ಮಾರಕವಾಗಿ ಕಟ್ಟಿಸಿರುವ ಹೈಯರ್ ಎಲಿಮೆಂಟರಿ ಶಾಲಾ ಕಟ್ಟಡವನ್ನು ತೆರೆದರು. ತಾ. ೩೦ನೇ ಮಂಗಳವಾರ ಬೆಳಿಗ್ಗೆ ೬-೩೦ ಗಂಟೆಗೆ ಮಡಿಕೇರಿಯಿಂದ ಮೈಸೂರಿಗೆ ಹೋದರು.

ಅಯ್ಯಾ,

ನಿಮ್ಮ ಕಳೆದ ವಾರದ ಪತ್ರಿಕೆಯಲ್ಲಿ–ಮಡಿಕೇರಿ ಮುನ್ಸಿಪಲ್ ಚುನಾವಣೆಯಲ್ಲಿ ನಾನೊಬ್ಬ ಉಮೇದುವಾರನಾಗಿ ಸ್ಪರ್ಧಿಸಿದೆನೆಂದು ಸ್ಪಷ್ಟವಾಗಿದೆ. ಆದರೆ ನಾನೊಬ್ಬ ಕಾಂಗ್ರೆಸಿಗನಾದುದರಿಂದ, ಕಾಂಗ್ರೆಸು ಉಮೇದುವಾರರಾದ ಶ್ರೀ. ಡಿ.ಯಸ್ ದೇವಯ್ಯಟ್ಟಿಯವರಿಗೆ ಎದುರು ನಿಲ್ಲಲು ಇಚ್ಛಿಸದೆ, ನೇಮಕ ಪತ್ರವಾಪಸು ತೆಗೆಯುವ ಅವಧಿ ಮುಗಿದರೂ, ನಾನು ನಂತರ ಯಾರನ್ನು ಓಟು ಕೇಳದೆ ಸುಮ್ಮನಾಗಿ ಸ್ಪರ್ಧಿಸಲಿಲ್ಲ.

ಬಿ. ಎಸ್. ತಿಮ್ಮಪ್ಪಯ್ಯ.

(ಹಿಂದಿನ ಪುಟದಿಂದ)

ಗೆ ತಿಳಿಯುತ್ತದೆ. ರಾಮರಾಜ್ಯವನ್ನು ವಾಲ್ಮೀಕಿಯು ಹೀಗೆ ವಿವರಿಸಿದ್ದಾನೆ. 'ರಾಮನು ರಾಜ್ಯವನ್ನಾಳುತ್ತಿದ್ದಾಗ ಸ್ತ್ರೀಯರು ವೈಧವ್ಯ ದುಃಖವನ್ನೇ ಕಾಣುತ್ತಿರಲಿಲ್ಲ. ದೇಶದ ಜನರು ದುಷ್ಟ ಮೃಗಗಳಿಂದಾಗಲೀ ಕೆಟ್ಟ ರೋಗಗಳಿಂದಾಗಲೀ ನರಳುತ್ತಿರಲಿಲ್ಲ. ಕಳ್ಳರ ಹೆಸರೇ ಇರಲಿಲ್ಲ. ಯಾವ ಪ್ರಜೆಗೂ ಯಾವ ವಿಧವಾದ ಅನರ್ಥವೂ ಉಂಟಾಗುತ್ತಿರಲಿಲ್ಲ ಹಿರಿಯರು ಕಿರಿಯರಿಗೆ ಪ್ರೇತ ಕಾರ್ಯ ಮಾಡುವ ಸಂಭವವೇ ಬರುತ್ತಿರಲಿಲ್ಲ. ಪವಂಥ ಜವರೂ ಸದಾ ಸಾಧೋಷಧರಿತರಾಗಿ ಧರ್ಮವೊಂದರಲ್ಲೇ ನಿರತರಾಗಿ ನೈರ-ಬುದ್ಧಿಯೇ ಇಲ್ಲದೆ ಎಲ್ಲರಲ್ಲಿಯೂ ಸ್ನೇಹದರಾಗಿಯೇ ಇರುತಿದ್ದರು. ಸರ್ವಸ್ತ ಪ್ರಜೆಗಳೂ ಸಂತಾನವನ್ನು ಪಡೆದು ದೀರ್ಘಾಯುಷ್ಯವುಳ್ಳವರನ್ನೇ ಕಾಣಬಹುದಿತ್ತು. ಸುಖದಿಂದಿರುತ್ತಿದ್ದರು.

ರಾಮರಾಜ್ಯದಲ್ಲಿ ಅತಿವೃಷ್ಟಿ ಅನಾವೃಷ್ಟಿ ಅಕಾಲವೃಷ್ಟಿಗಳಲ್ಲದೆ ಮೇಘವು ಸಕಾಲಕ್ಕೆ ಮಳೆಗಳನ್ನು ಸುರಿಸುತಿದ್ದುದರಿಂದ ಎಲ್ಲಾ ಗಿಡ ಮರ ಬಳ್ಳಿಗಳು ಯಾವಾಗಲೂ ಫಲಪುಷ್ಪಗಳಿಂದ ತುಂಬಿರುತಿದ್ದವು. ಯಾವಾಗಲೂ ಗಾಳಿಯು ಸುಖಸ್ಪರ್ಶವಾಗಿ ಬೀಸುತಿತ್ತು. ಸಾಲ್ಮನ್ ಮಣ್ಣಾದವರೂ ತಮ್ಮ ತಮ್ಮ ವೃತ್ತಿಗಳನ್ನು ತೃಣ ಮಾತ್ರವೂ ಲೋಪವಿಲ್ಲದಂತೆ ನಡೆಸುತಿದ್ದರು. ಪ್ರಜೆಗಳೆಲ್ಲರೂ ಧರ್ಮನಿರತರೂ, ಧರ್ಮಪರಾಯಣರೂ ಮತ್ತು ಸತ್ಯವಾದಿಗಳಾಗಿಯೇ ಇದ್ದರು. ಇತರರು ಯಾವಾಗಲೂ ಶುಭ ಲಕ್ಷಣ ಸಂಪನ್ನರೂ, ಸೌಭಾಗ್ಯ ಸಂಪನ್ನರೂ ಆಗಿದ್ದರು.

ಇಂತಹ ರಾಮರಾಜ್ಯವು ನಮ್ಮ ವಾಸ್ತವ್ಯ ಭೂಮಿಯಲ್ಲಿ ಮತ್ತೊಮ್ಮೆ ಸ್ಥಾಪನೆಯಾಗಲೆಂದು ಹಾರೈಸುತ್ತೇನೆ.

THE COORG TRANSPORT LTD., MERCARA.

Notice is hereby given that all those who may be desirous of taking up the Managing Agency of the above Company may send their offers, setting out the terms on which they are agreable to take up the Managing Agency of the Company on or before the 10th September 1952.

Taking shares of the Company of the value of Rs. 40,000/— (Forty thousand) and above will be considered as one of the grounds of preference when the offers are taken up for consideration.

Sd/ C. M. THIMAYA,
Chairman,
The Coorg Transport Ltd.,
2–1 *Mercara.*

"ದುಷ್ಚಟ ಬಿಟ್ಟು ಯೋಗ್ಯತೆ ಗಳಿಸಿರಿ"

ವಿದ್ಯಾರ್ಥಿಗಳಿಗೆ ಜನರಲ್ ಕಾರ್ಯಪ್ಪನವರ ಬುದ್ಧಿವಾದ.

ಹಿಂದೂದೇಶದ ಸರ್ವಸೇನಾನಿಯೂ ಆದ ಜನರಲ್ ಕಾರ್ಯಪ್ಪನವರು ಕಾರೀ ಯಪ್ಪ ರವರ್ನಿ ಕೊಡಗಿಗೆ ಬಂದು ಕಾರೀ ಯಪ್ಪ ರವರ್ನಲ್ಲಿ ಹಿಂತೆಳೆದರು. ಕಾರೀಕಪ್ಪ ರವರ್ನಲ್ಲಿ ಅವರು ಕೊಡಗು ಸರಕಾರಿ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು. ಅದರ ಸಾರಾಂಶವನ್ನು ವಾಚಕರಿಗಾಗಿ ಇಲ್ಲಿ ಕೊಡಲಾಗಿದೆ.

ಪ್ರೊ. ಅಚ್ಯುತನ್ ಪಿಳ್ಳೈಯವರ ಸ್ವಾಗತ.

ಜನರಲ್ ಕಾರ್ಯಪ್ಪನವರು ಬೆಳಿಗ್ಗೆ ಹಾಗೂ ಗಂಟೆಗೆ ಹೈಸ್ಕೂಲು ಎಸ್. ಸಿ. ಸಿ. ಪಡೆಯ ಪರಿಶೀಲನೆ ಮಾಡಿದರು. ತದನಂತರ ಕಾಲೇಜ್ ಹಾಲ್‌ನಲ್ಲಿ ಸಭೆ ಸೇರಿಯಿತು. ಪ್ರಾರ್ಥನೆಯ ತರುವಾಯ ಜನರಲರಿಗೆ ಸ್ವಾಗತ ಬಯಸುತ್ತಾ ಪ್ರಿನ್ಸಿಪಲರು ಹೀಗೆಂದರು:—

"ನಮ್ಮ ದೇಶದ ರಾಷ್ಟ್ರೀಯ ಅತಿಥಿರ ವಸೆಗಳ ಪ್ರತೀಕದಂತಿರುವ ನಿಮ್ಮನ್ನು ಸ್ವಾಗತಿಸಲು ಹರ್ಷವಾಗುತ್ತದೆ. ಈ ಕಾಲೇಜಿನ ಭಾಗ್ಯ ದಿನವಿದು. ಪ್ರತಿ ದಿನ ನಾನು ನಮ್ಮ ಕಾಲೇಜಿನಲ್ಲಿರುವ ನಿಮ್ಮ ಭಾವಚಿತ್ರವನ್ನು ವಿದ್ಯಾರ್ಥಿಗಳಿಗೆ ತೋರಿಸಿ, ಅವರಲ್ಲನುಸರಿಸಿದೆಂದು ಹೇಳುವ ರೂಢಿ ಇದೆ. ಇಂದು ನೀವೇ ಇಲ್ಲಿಗೆ ದಯಮಾಡಿಸಿ, ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತಾಡಲಿರುವದು ಶಂಬಾ ಹರ್ಷದಾಯಕವಾದುದು. ನಿಮ್ಮ ಜೀವನದಲ್ಲಿ ನೀವು ಈ ಹಿಂಸೆ ಭಾರತೀಯರಾರೂ ಏಶದ ಹಲವು ಅಂತಸ್ತುಗಳಿಗೆ ಏರಿ ಮಗ್ಗದ ಶ್ರೇಷ್ಠರಾಗಿರುವಿರಿ. ವಿಲಿಟರಿ ಶರಬೇತು ಕಾಲದಿಂದ ಹಿಡಿದು ಅನೇಕ ಪ್ರಥಮ ಸ್ಥಾನಗಳನ್ನು ಪಡೆದು ಪ್ರಥಮ ಭಾರತೀಯ ದಂಡನಾಯಕರಾದಿರಿ. ನಿಮ್ಮ ನೇತೃತ್ವದಲ್ಲಿ ಭಾರತ ಸೈನ್ಯವು ಪ್ರಥಮವಾಗಿ ಸಾಮೂಹಿಕ ಕೆಲಸ ಕಾರ್ಯಗಳಿಗೆ ಕೈಯಿಕ್ಕಿದೆ. ಆಹಾರ ಬೆಳೆಸುವದರಿಂದ ಹಿಡಿದು ಬಡಗಾಲಪೀಡಿತರಿಂದ ನೆರವನ್ನು ಕೊಡುವ ಮೊದಲಾದ ಕೆಲಸಗಳನ್ನು ಮಾಡಿ ಸರ್ವರ ಪ್ರಶಂಸೆಗೆ ಪಾತ್ರವಾಗಿದೆ.

ನಮ್ಮ ಕಾಲೇಜು ನಾಲ್ಕು ವರ್ಷದ ಶಿಶುವಾದರೂ ಈ ಸಮಯದಲ್ಲಿ ಅದು ಯೋಗ್ಯ ರೀತಿ ಕೆಲಸ ಮಾಡಿದೆ. ಯಾರಾದರೂ ಹೆಮ್ಮೆಪಟ್ಟುಕೊಳ್ಳಬಹುದಾದಂಥಾ ಪ್ರಗತಿಯಾಗಿದ್ದನ್ನು ತೋರಿಸಿದೆ. ಪರೀಕ್ಷೆ ಫಲಿತಾಂಶದಲ್ಲೇ ಮಾತ್ರವಲ್ಲ; ಆಟೋಟಗಳಲ್ಲೂ, ಇತರ ಕ್ಷೇತ್ರಗಳಲ್ಲೂ ಯೋಗ್ಯ ಪಥದಲ್ಲಿ ಮುಂದರಿಯುತ್ತಿದೆ. ಈ ವರ್ಷ ಕಾಲೇಜಿನಲ್ಲಿ ಸಮೂಹಸೇವಾ ಪಥಕ ಒಂದನ್ನು ವಿಧಿಸಿರುವೆವು. ಇದಕ್ಕೆ ಗುಂಪಾಗಿ ವಿದ್ಯಾರ್ಥಿಗಳು ಹೆಸರು ಕೊಟ್ಟಿರುವರು. ಇವರು ಸಮುದಾಯಿಕ ಯೋಜನೆ, ಮಿತ್ರರ ಗ್ರಾಮಾಭಿವೃದ್ಧಿ ಕೆಲಸಗಳಲ್ಲಿ ಭಾಗವಹಿಸಲಿರುವರು. ವಯಕ್ತಿಕ ಶಿಸ್ತಣ, ಗ್ರಾಮೀಣೈರ್ಮಲ್ಯ, ಮೊದಲಾದುವುಗಳಿಗಾಗಿ ದುಡಿಯಲಾಗುವದು.. ನಾವು ಕಾಲೇಜಿನಲ್ಲಿ ಕೇವಲ ಪರೀಕ್ಷೆಗೆ ಕೊರಲಿರುವ ಅಭ್ಯರ್ಥಿಗಳನ್ನೇ ತಯಾರಿಸುವದಲ್ಲ; ಜೀವನದ ಪ್ರತಿ ಕ್ಷೇತ್ರದಲ್ಲೂ ಆದರ್ಶರಾಗಬೇಕಾದ ಮಾನವ ರಚನೆ ಮಾಡುತ್ತಿರುವೆವು. ಅಧ್ಯಾಪಕ ವೃತ್ತಿಯೂ ರಚನಾತ್ಮಕ ಕಲೆಯಾಗಿದೆ. ಅದರಂತೆ ನಾವು ಶ್ರಮಿಸುವೆವು. ಇಷ್ಟಿ ಕಟ್ಟಡ ಮತ್ತು ಆವರಣವು ಜೀವಾಗಿಲ್ಲದೆ ತೊಂದರೆಗಳು ಹಲವಿದ್ದರೂ ಮುಂದೆ ಹೊಸ ಕಟ್ಟಡಕ್ಕೆ ಹೋದಾಗ ಯೋಗ್ಯ ಅವಕಾಶ ದೊರೆತು ಕೊಡಗಿನ ಈ ಕಾಲೇಜು ಒಂದು ಆದರ್ಶ ಕಾಲೇಜಾಗಲೆಂದೆ ದುಡಿಯುವೆವು' ಎಂದರು.

ಜನರಲರ ಪ್ರಸಂಶೆ.

ಕಾಲೇಜಿನ ಸಂಕ್ಷಿಪ್ತ ವಿವರವನ್ನು ಕೇಳಿ ಸಂತೃಪ್ತನಾದೆನು. ಪರೀಕ್ಷಾ ಫಲಿತಾಂಶವು ಜೀವಾಗಿದೆ. ಆಟೋಟಗಳಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಹಾಕಿಕಪ್ಪನ್ನು ಪಡೆದುದೂ ಹೊಗಳಲರ್ಹವಾದುದು. ಈ ನಾಲ್ಕು ವರ್ಷಗಳಲ್ಲಿ ಈ ಯೋಗ್ಯ ಆದರ್ಶವನ್ನು ಹಾಕಿದ ವಿದ್ಯಾರ್ಥಿಗಳಿಗೂ, ಅಧ್ಯಾಪಕರಿಗೂ ವಂದನೆಗಳು.

ಈ ವೆಳಿಗ್ಗೆ ನಾನು ಎನ್. ಸಿ. ಸಿ. ದಳವನ್ನು ಪರಿಶೀಲಿಸಿದ ನಂತರ ಹೈಸ್ಕೂಲು ಆವರಣವನ್ನೂ, ಶಾಲಾ ಕಟ್ಟಡ, ವ್ಯಾಯಾಮಶಾಲೆಗಳನ್ನೂ ನೋಡಿದೆನು. ನಿಜವಾಗಿಯೂ ಇವು ಯಾವುದೂ ಜೀವಾಗಿಲ್ಲ ಎಲ್ಲವೂ ಕೊಳಕಾಗಿವೆ. ಶಾಲಾ ಕೋಣೆಗಳೂ, ವಿದ್ಯಾರ್ಥಿನಿವಾಸಗೃಹವೂ ಕೊಳಕಾಗಿದೆ. ಕಿಡಿಕಿಗೆ ಕನ್ನಡಿಗಳೂ, ಗೋಡೆಗೆ ಸುಣ್ಣವೂ ಇಲ್ಲದ ಈ ಕಟ್ಟಡಗಳು ಯೋಗ್ಯವಾಗಿಲ್ಲ. ವ್ಯಾಯಾಮಶಾಲೆಯಲ್ಲಿ ಏನೂ ಇಲ್ಲ. ಅದು ಕೇವಲ ಕೊಟ್ಟಿಗೆಯಂತಿದೆ. ಶಿಸ್ತಿನ ತತ್ವವನ್ನು ಕಲಿಯದಿದ್ದರೆ ಜೀವನದಲ್ಲಿ ದಕ್ಷತೆ ಬರಲಾರದು. ಮೂವತ್ತು ವರ್ಷಗಳ ಹಿಂದೆ ಇದೇ ಶಾಲೆಯಲ್ಲಿ ನಾನು ಓದುತ್ತಿದ್ದಾಗ ಇದರ ಪರಿಸ್ಥಿತಿ ಹೀಗಿರಲಿಲ್ಲ. ಇದಕ್ಕೆ ಶಾಲಾ ಸಿಬ್ಬಂದಿಯನ್ನು ನಾನು ದೂಷಿಸುವದಿಲ್ಲ. ಸರಕಾರವು ಇದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕಾದುದು ಕರ್ತವ್ಯವಾಗಿದೆ. ಶಿಬಿರಾಗಿರುವ ಒಟ್ಟೆ ಬೆರೆ, ಶಿಬಿರಾಗಿರುವ ಶರೀರ, ಶಿಬಿರಾಗಿರುವ ಮನಸು ಮತ್ತು ಬುದ್ಧಿ ಇರುವವನೇ ಚತುರನೂ, ಯೋಗ್ಯನೂ ಎನಿಸುವನು. ಎಂ. ಎ, ಬಿ. ಎ. ಡಿಗ್ರಿ ತೆಗೆಯುವದೇ ವಿದ್ಯೆಯ ಗುರಿಯಲ್ಲ. ಈ ಡಿಗ್ರಿಗಳು ಜೀವನ ಯಾತ್ರೆಯಲ್ಲಿ ಹೆಚ್ಚು ಸಹಕಾರಿಗಳಲ್ಲ. ಯೋಗ್ಯತೆಬೇಕು. ಶಾರೀರಿಕ ಸಂಪತ್ತು ಬೇಕು. ಕರ್ತವ್ಯಕುಶಲತೆ ಬೇಕು.

ಶಿಬಿರಾಗಿರದ ಒಟ್ಟೆ ಬರೆ, ಉದ್ಧ ಕೂದಲು, ಅಡ್ಡಸಂಜೆಗಳನ್ನು ಹಾಕಿಕೊಂಡು ನಾವು ರಾಷ್ಟ್ರೀಯವಾದಿಗಳೆನ್ನುವವರು ಕೆಲವರಿದ್ದಾರೆ. ರಾಷ್ಟ್ರೀಯತೆ ಕೊಳಕು ಜೀವನದಲ್ಲಿಲ್ಲ. ಅದ್ದರಿಂದ ವಿದ್ಯಾರ್ಥಿಗಳು ಶಿಬಿರಾಗಿರಲು ಕಲಿಯಿರಿ. ಇಂದು ನೀವು ಅದನ್ನು ಅಭ್ಯಾಸ ಮಾಡಿದರೆ ನಾಳೆ ಶಿಬಿರಾದ, ಪ್ರಗತಿಪರವಾದ, ಸುಂದರ ರಾಷ್ಟ್ರವನ್ನು ಕಟ್ಟಲು ಶಕ್ತರಾಗುವಿರಿ. ಪರಂಪರೆಯಿಂದ ಬಂದ ಪದ್ಧತಿ ಸಂಪ್ರದಾಯಗಳ ದಾಸರಾಗುವದೂ ಬೇಡ. ವಿಚಾರಶೀಲರಾಗಿರಿ. ಬಿಕೆಟ್ಸಿನ ಬುದ್ಧಿಯಿಂದ ಪ್ರತಿಯೊಂದನ್ನೂ ಪರಿಶೀಲಿಸುವ ಬುದ್ಧಿಯನ್ನು ಹೆಚ್ಚಿಸಿಕೊಳ್ಳಿರಿ.

ದೃಷ್ಟಿ ವಿಶಾಲತೆ.

ವಿದ್ಯಾರ್ಥಿಗಳ ದೃಷ್ಟಿ ವಿಶಾಲವಿರಬೇಕು. ನಾನು ನನ್ನದು ಎಂಬ ಭಾವನೆಯನ್ನು ಬಿಡಬೇಕು, ಇಡೀ ಪ್ರಪಂಚ ನಿನ್ನದು. ಜಗತ್ತಿನ ನಾಗರಿಕರು ನೀವೆಂದು ಭಾವಿಸಿ ಮಾನವ ಗಣದ ಸೇವೆಗಾಗಿ ತಯಾರಾಗಿರಿ. ವಿವಿಧ ರೀತಿಯ, ವಿವಿಧ ಆಸಕ್ತಿ ಇರುವ ಜನರು ಬೇಕಾದಂತೆ ಟೀಕೆ ಮಾಡುವರು. ಅಂಥಾ ಟೀಕೆಗಳಿಂದ ತಲೆಕೆಡಿಸಿಕೊಳ್ಳದಿರಿ. ನಿಮಗೆ ಸರಿಯೆಂದು ತೋರಿದುದನ್ನು ಮಾಡಲು ಹಿಂಜರಿಯದಿರಿ.

ಯಾವಾಗಲೂ ಸಾಮೂಹಿಕ ಆಟೋಟಗಳಲ್ಲಿ ವಿದ್ಯಾರ್ಥಿಗಳು ಹೆಚ್ಚು ಭಾಗವಹಿಸಬೇಕು. ಇದರಿಂದ ಸ್ವಾರ್ಥಸಂಕೀರ್ಣತೆಗಳು ಕಡಿಮೆಯಾಗಿ ಒಗ್ಗಟ್ಟಾಗಿ ವರ್ತಿಸುವ ಅಭ್ಯಾಸ ಹೆಚ್ಚುವದು. ಆದರ್ಶ ನಡತೆಯ, ತಾನು ಹೇಳಿದಂತೆ ನಡೆಯುವ ವ್ಯಕ್ತಿಯೇ ಇತರರನ್ನೂ ನಡೆಸುವ ಮುಂದಾಳಾಗುವನಲ್ಲದೆ ಬಾಯಿಪಟೇಶ ಮಾಡುವವನಲ್ಲ. ಆದ್ದರಿಂದ ಅವನವನು ಒಳ್ಳೆಯವನಾಗಬೇಕು. ದಕ್ಷನಾಗಬೇಕು. ಅಂದರೆ ಇತರರ ಮೇಲೆಯೂ ಪ್ರಭಾವಬೀರಲು ಶಕ್ತನಾಗುವನು.

ವಿದ್ಯಾರ್ಥಿಗಳ ದೃಷ್ಟಿಯಲ್ಲಿ ಜಗತ್ತಿನಲ್ಲಿ ಎರಡು ಪ್ರಾಮುಖ್ಯ ವ್ಯಕ್ತಿಗಳೆಂದರೆ— ಮಾತಾಪಿತೃಗಳು ಮತ್ತು ಅಧ್ಯಾಪಕರು. ಇವರಿಂದ ರಾಷ್ಟ್ರದ ರಚನೆಯಾಗುವದಾಗಿ ಯೋಗ್ಯಪ್ರಜೆಗಳು ಹೆಚ್ಚಬೇಕಾದರೆ, ದೇಶವು ಆದರ್ಶವೆನಿಸಬೇಕಾದರೆ ಇವರ ಜವಾಬ್ದಾರಿ ತುಂಬಾ ದೊಡ್ಡದಿದೆ. ನಾನು ಈಗಿನ ಆಧುನಿಕ ಮಾಂಟಿಸೋರಿ ವಿಧಾನದ ವಿದ್ಯಾಭ್ಯಾಸಕ್ರಮವನ್ನು ವೇಚ್ಚವವನಲ್ಲ. ಮಕ್ಕಳನ್ನು ಶಿಕ್ಷಿಸಿ ಕಲಿಸಬೇಕೆಂಬ ನಂಬಿಕೆ ಇರುವವನು. ಮಕ್ಕಳಲ್ಲಿ ಶಿಸ್ತುಬೇಕು, ಕರ್ತವ್ಯಶೀಲತೆಬೇಕು. ಆದರೆ ಇವು ಉಪದೇಶದಿಂದ ಬರುವಂಥಾವಲ್ಲ. ಅಧ್ಯಾಪಕರು, ತಂದೆ ತಾಯಿಗಳು ಆದರ್ಶರಾಗಿ ಮಾರ್ಗದರ್ಶನ ಮಾಡಬೇಕು.

ರಾಜಕೀಯ ಪರಿಜ್ಞಾನ.

ವಿದ್ಯಾರ್ಥಿಗಳು ಸಕ್ರಿಯರಾಜಕೀಯದಲ್ಲಿ ಕೈಹಾಕಬಾರದು. ಅನೇಕ ರಾಜಕೀಯ ಪಕ್ಷಗಳು ತಮ್ಮ ಗುರಿಯ ಸಾಧನೆಗಾಗಿ ವಿದ್ಯಾರ್ಥಿಗಳನ್ನು ಉಪಯೋಗಿಸಿಕೊಳ್ಳುವದಿದೆ. ವಿದ್ಯಾರ್ಥಿಗಳು ಈ ರೀತಿ ಇತರರ ಕೈಗೊಂಬೆಗಳಾಗಬಾರದು. ಹಾಗೆಂದಾಗ ರಾಜಕೀಯವನ್ನು ಅಭ್ಯಾಸ ಮಾಡಬಾರದೆಂದಲ್ಲ. ಅದಷ್ಟು ರಾಜಕೀಯ ಜ್ಞಾನವನ್ನು ಮೂಡಿಕೊಳ್ಳಬೇಕು. ವಿದ್ಯಾರ್ಥಿಜೀವನವು ಮುಂಗಿದು ವಿಶಾಲ ಪ್ರಪಂಚಕ್ಕೆ ಕಾಲಿಕ್ಕುವಾಗ ತಮಗೆ ಬೇಕಾದ ರಾಜಕೀಯವನ್ನು ಆರಿಸಿಕೊಳ್ಳುವ ಜ್ಞಾನವನ್ನು ಪಡೆದಿರಬೇಕು. ಪ್ರತಿ ವಿದ್ಯಾರ್ಥಿಯೂ ಜೀವನದಲ್ಲಿ ಒಂದು 'ಹಾಬಿ' ಇಟ್ಟುಕೊಳ್ಳಬೇಕು. ಸ್ಟಾಂಪು ಸಂಗ್ರಹಿಸುವದು, ಪಕ್ಷಿಗಳ ಮೊಟ್ಟೆ, ಚಿಟ್ಟೆ ಮೊದಲಾದುವುಗಳಲ್ಲಿ ಯಾವುದನ್ನಾದರೂ ಸಂಗ್ರಹಿಸುವುದನ್ನು ಕೈಕೊಳ್ಳಬಹುದು.

ಚಲನೆ ಚಿತ್ರಗಳ ದುಷ್ಚಟ.

ವಿದ್ಯಾರ್ಥಿಗಳು ಚಲನ ಚಿತ್ರಗಳಿಗೆ ಹೋಗುವ ಕೆಟ್ಟ ಅಭ್ಯಾಸವನ್ನು ಬಿಡಬೇಕು. ಚಲನ ಚಿತ್ರಗಳಲ್ಲಿ ಎಲ್ಲವೂ ಒಳ್ಳೆಯವಲ್ಲ. ಚಲನ ಚಿತ್ರಗಳು ಮಾನವನ ಬುದ್ಧಿವಿಕಾಸಕ್ಕೂ, ಜ್ಞಾನಪ್ರಸಾರಕ್ಕೂ ಅತ್ಯಮೂಲ್ಯ ಸಾಧನಗಳಾದರೂ ಇಂದು ಚಲನ ಚಿತ್ರಗಳಿಂದ ವಿಪರೀತ ಹಾನಿಯಾಗುತ್ತಿದೆ. ಕಳ್ಳಸುಳ್ಳದ ಅಶ್ಲೀಲ ಚಿತ್ರಗಳು ಜನತೆಯ ಮೇಲೆ ಹಾನಿಕಾರಕ ಪರಿಣಾಮವನ್ನುಂಟುಮಾಡುತ್ತಿವೆ. ಸಣ್ಣ ವಯಸ್ಸಿನಲ್ಲಿ ಕಾಡುಕಳ್ಳತನ, ಜೂಜಾಟಗಳಿಗಿಂತಲೂ ಹೆಚ್ಚಿನ ಹಾನಿ ಸಿನೆಮಾದಿಂದ ನಮ್ಮ ಸಮಾಜಕ್ಕೆ ಆಗುತ್ತಿದೆ. ಕಾಡಿದವನು ಹಾಗೂ ಜೂಜಾಡುವವನು ಕುಡಿದಾಗ ಮಾತ್ರ ಹಾನಿಕರವಾಗಿ ವರ್ತಿಸುತ್ತಾನೆ. ಆದರೆ ಸಿನೆಮಾದ ಪ್ರಭಾವದಿಂದ ಪ್ರೀತಿಗೆಡಿಸಿಕೊಂಡವನು ಕಡೆಯವರೆಗೆ ಹಾಗೆಯೇ ಉಳಿಯುವನು. ನಮ್ಮ ಈ ವಿಶಾಲ ದೇಶದಲ್ಲಿ ಅನೇಕ ಆದರ್ಶ ಸುಂದರ ದೃಶ್ಯಗಳೂ, ಚಾರಿತ್ರಾರ್ಹ ಸ್ಥಳಗಳೂ, ವೈಜ್ಞಾನಿಕ ಪ್ರಗತಿಯ ಕೇಂದ್ರಗಳೂ ಹಿಮಾಲಯ, ಉದಯಪುರ ಮೊದಲಾದ ಸಾವಿರಾರು ವಿಷಯಗಳಿವೆ. ಅವುಗಳ ಪರಿಚಯವನ್ನು ಜನತೆಗೆ ಮಾಡಿಕೊಡುವದು ಚಲನಚಿತ್ರ ನಿರ್ಮಾಪಕರ ಕರ್ತವ್ಯವಾಗಬೇಕು. ಆದ್ದರಿಂದ ಶಾಲಾ ಕಾಲೇಜುಗಳಲ್ಲಿ ಪ್ರತ್ಯೇಕ ಚಲನಚಿತ್ರ ಪ್ರದರ್ಶನಗಳ ವಿಭಾಗವು ಮಾಡಿಕೊಂಡು ವಿದ್ಯಾರ್ಥಿಗಳಿಗೆ ಯೋಗ್ಯ ಚಿತ್ರಗಳನ್ನು ಮಾತ್ರ ತೋರಿಸುವಂತೆ ಏರ್ಪಡಿಸಬೇಕು. ಇಲ್ಲಿಯ ವಿದ್ಯಾರ್ಥಿಗಳು ಚಿತ್ರಪ್ರೇಮಿಗಳೆಂಬುದನ್ನು ನಾನು ಬಲ್ಲೆ. ನನ್ನ ಸಲಹೆಯನ್ನು ತೆಗೆದು ಇನ್ನಾದರೂ ಅದನ್ನು ಕಡಿಮೆ ಮಾಡಬೇಕು.

ಆಟೋಟಗಳ ವ್ಯವಸ್ಥೆ.

ವಿದ್ಯಾರ್ಥಿಗಳು ಎನೇ ಪ್ರೇಮಿಗಳಾಗಲು ಯೋಗ್ಯ ಆಟೋಟಗಳ ವ್ಯವಸ್ಥೆ ಇಲ್ಲದಿರುವುದು ಒಂದು ಕಾರಣವಿರಬಹುದು. ಇಂದು ಬೆಳಿಗ್ಗೆ ಕಾಲೇಜು ಕಟ್ಟಡ ನೋಡಲು ಹೋಗಿದ್ದೆ. ಯೋಗ್ಯ ಕಟ್ಟಡ ಆಗುತ್ತಿದೆ. ಆದರೆ ಆತೀ ಅವಶ್ಯವಾದ ಆಟದ ಮೈದಾನ, ವ್ಯಾಯಾಮ ಶಾಲೆ, ವಿದ್ಯಾರ್ಥಿನಿವಾಸಗೃಹಗಳ ವ್ಯವಸ್ಥೆ ಮಾಡಿ

ಲ್ಲ. ಇದು ತೀರಾ ಅತೃಪ್ತಿಕರ. ಇವು ಗಳಿಗೆ ಹೆಚ್ಚಿನ ಪ್ರಾಧಾನ್ಯತೆ ಕೊಟ್ಟು ಸರ ಕಾರವು ಇವುಗಳನ್ನು ಬೇಗ ಮಾಡಿಸಬೇ ಕು. ಮಡಿಕೇರಿಯು ಕೊಡಗಿನ ರಾಜ ಧಾನಿಯಾಗಿದ್ದು ಅದಕ್ಕೆ ಉತ್ತಮ ಆಟದ ಮೈದಾನಗಳು, ಓಟದ ದಾರಿಗಳು, ಈಜು ವ ಕೊಳಗಳು ಹೊದಲಾದುವು ಇರಬೇ ಕಾದುದು ಅವಶ್ಯ. ತಮ್ಮ ವಿಲಾಸ ಜೀ ವನಕ್ಕಾಗಿ ಕಾರು, ರೇಡಿಯೋ ಮಂತ್ರಿಕ ರ ಕಾರಣಗಳಿಗಾಗಿ ಸಹಸ್ರಾರು ಖರ್ಚು ಮಾ ಡುವ ಪ್ಲಾಂಟರುಗಳು ಈ ವಿಚಾರಗಳಿಗೆ ಧನಸಾಹಾಯ ಮಾಡುವುದು ಅಗತ್ಯವಿದೆ.

ಈಗ ಕಾಲೇಜಿನಲ್ಲಿ ಹೈಸ್ಕೂಲುಗಳಲ್ಲಿ ರುವ ವಿದ್ಯಾರ್ಥಿಗಳ ಆರೋಗ್ಯ ಚೆನ್ನಾಗಿ ಲ್ಲ ಕಾಲೇಜಿನಲ್ಲಿ ಓದುತ್ತಿದ್ದರೂ ಪ್ರಾ ಥಮಿಕ ಶಾಲೆಯ ಮಕ್ಕಳಷ್ಟಿರುವ ಅನೇ ಕ ವಿದ್ಯಾರ್ಥಿಗಳಿದ್ದಾರೆ. ಯೋಗ್ಯ ಆ ಹಾರ ಯೋಗ್ಯಕಸರತ್ತು ಇಲ್ಲದೆ ಈ ರೀತಿ ಬೆಳವಣಿಗೆ ಕಡಿಮೆಯಾಗಿದೆ. ಹಿಂದಿನ ಕಾಲದಲ್ಲಿ ಹೀಗಿರಲಿಲ್ಲ. ನಾಲ್ಕನೇ ಐದ ನೆ ತರಗತಿಗಳಲ್ಲಿಯೂ ವಿದ್ಯಾರ್ಥಿಗಳೂ ಕೂ ಡ ದೊಡ್ಡವರಾಗಿರುತ್ತಿದ್ದರು. ಮಕ್ಕಳ ಶಾರೀರಿಕ ಬೆಳವಣಿಗೆಯ ವಿಚಾರದಲ್ಲಿ ತಂ ದೆತಾಯಿಗಳು ತೊಂದರೆ ತೆಗೆದುಕೊಳ್ಳ ಬೇಕು.

ನಾನು ಹಿಂದೂದೇಶದ ಅನೇಕ ಭಾ ಗಗಳನ್ನು ತಿರುಗಿ ನೋಡಿರುವೆನು. ಕೊ ಡಗಿನ ಯುವಕ ಯುವತಿಯರಲ್ಲಿ ಒಂದು ಚೈತನ್ಯ, ಸ್ಫೂರ್ತಿ ಇದೆ. ಇಷ್ಟು ಯೋಗ್ಯ ಕಚ್ಚಾ ವಸ್ತು ಇದೆ. ಅದನ್ನು ಸರಿ ಯಾಗಿ ಉಪಯೋಗಿಸಿದರೆ ಅದರ್ಶ ಜನತೆ ಯನ್ನು ತಯಾರಿಸುವ ಸಾಧ್ಯತೆ ಇದೆ. ಯೋಗ್ಯ ಅನುಕೂಲತೆ, ತರಬೇತಿ, ಅವ ಕಾಶ ಕಲ್ಪಿಸಿ ಕೊಟ್ಟರೆ ಜಗತ್ತಿಗೆ ಕೀರ್ತಿತ ರುವ ಯೋಗ್ಯರನ್ನು ಇಲ್ಲಿ ತಯಾರಿಸ ಬಹುದಾಗಿದೆ.

ಹೆಸರುವಾಸಿಗಳ ಗಿರಿ

ಯಾವಾಗಲೂ ವಿದ್ಯಾರ್ಥಿಗಳು ನಗಣ್ಯ ಮುಖರಾಗಿರಬೇಕು. ಯಾವ ವ್ಯಸನ ಮುಖಗಳೂ ಅವರನ್ನು ಸೋಂಕಬಾರದು ಹಿಂದೂದೇಶಕ್ಕೆ ಇಂದು ಯೋಗ್ಯ ಯುವ ಕ ಯುವತಿಯರು ಬೇಕಿದ್ದಾರೆ. ಹಿಂ ದೂದೇಶದ ಪುನರ್ರಚನೆಯನ್ನು ಮಾಡಿ ಹಿಂದೂದೇಶದ ಬೆಳಕು ಸಮಗ್ರ ಜಗತ್ತಿಗೆ ಹಬ್ಬುವಂತೆ ಮಾಡಲು ಯೋಗ್ಯ ಜನಾಂ ಗದ ಅವಶ್ಯಕತೆ ಇದೆ. ನಿಮಗಾಗಿ ಎರ ಡು ಶಬ್ದಗಳನ್ನು ಕೊಡಬಲ್ಲೆ. 'Deep ened' ಎಂಬ ಶಬ್ದವು ನಿಮ್ಮ ಮನಸ್ಸಿನಲ್ಲಿ ಸರ್ವದಾ ಇರಲಿ. ಅದರ ಇಂಗಿತವು ಹೀಗಿದೆ–'ಡಿ' ಎಂದರೆ 'ಡಿಸಿಪ್ಲಿನ್' ಶಿಸ್ತು. 'ಇ' ಎಂದರೆ 'ಎನರ್ಜಿ' ಚೈತನ್ಯ. 'ಇ' ಎಂದರೆ 'ಎಂಟರ್ ಪ್ರೈಸ್' ಕಾರ್ಯಶಕ್ತಿ. 'ಎ' ಎಂದರೆ 'ಪರ್ಸಿವಿಯರೆನ್ಸ್' ಸಾಧಿಸು ವ ಬಯಕೆ. 'ಪಿ' ಎಂದರೆ 'ಕರೇಜ್' ಧೈರ್ಯ 'ಯ' ಎಂದರೆ 'ಅನ್ ಸೆಲ್ಫಿಷ್‌ನೆಸ್' ನಿಸ್ವಾರ್ಥತೆ 'ಡಿ' ಎಂದರೆ 'ಡಿಟರ್ಮಿನೇಶನ್' ದೃಢ ನಿಶ್ಚಯ. ಈ ಗುಣ ಗಳನ್ನು ಬೆಳೆಸಿಕೊಂಡು ದುಡಿದರೆ ನಾವು ಯೋಗ್ಯರೂ, ಕರ್ಮಕುಶಲರೂ ಆಗುವುದ ರಲ್ಲಿ ಸಂಶಯವಿಲ್ಲ.

ದಕ್ಷಿಣ ಆಫ್ರಿಕೆಯಲ್ಲಿ ಸತ್ಯಾಗ್ರಹ.

ಮಾನವೀಯ ಅಧಿಕಾರದ ವ್ಯಾಪ್ತಿ ಯನ್ನು ಧಿಕ್ಕರಿಸಿ ನಡೆಯುವ ಉದ್ಧಟತ ನವನ್ನು ದಕ್ಷಿಣ ಆಫ್ರಿಕೆಯು ತೋರಿಸು ತ್ತಾ ಬಂದಿರುವುದು ನಿಜಕ್ಕೂ ಶೋಚನೀ ಯ; ವಿಶ್ವರಾಷ್ಟ್ರಗಳಲ್ಲಿ ಕ್ಷೋಭೆಯನ್ನೂ ಅಸಂತೋಷವನ್ನೂ ಇದು ಹುಟ್ಟಿಸಿದ್ದು, ಇದರ ಪರಿಣಾಮವು ಭೀಕರವಾಗುವ ಅಂ ಜಿಕೆ ಇದೆ. ಮಲನ್ ಸರಕಾರದ ನೀತಿ ಯು ದಿನ ಹೋದಂತೆ ಉಗ್ರವೂ ಕಟುತರ ವೂ ಆಗಿ ಮೂರ್ಖಡುತ್ತಿದೆ. ಲೋಕದ ಕಣ್ಣನ್ನು ಚುಚ್ಚಿ ನೋಯಿಸುವ ಚಪಲವ ನ್ನು ಅವರು ತೋರಿಸುತ್ತಿರುವುದು ವಿಷಾ ದಕರ. ವಿಶ್ವಸಂಸ್ಥೆಯು ಮಾನವನ ಹ ಕ್ಕುಭಾಧ್ಯತೆಗಳ ಕರಡನ್ನು ಸಿದ್ಧಗೊಳಿಸಿ ದಾಗ ವರ್ಣಭೇದದಂಥ ಅನೈಸರ್ಗಿಕ ವಾದ ಮತ್ತು ಅವಾಂಛನೀಯವಾದ ಪ ದ್ಧತಿಯನ್ನು ತಿರಸ್ಕರಿಸಿದ್ದರೂ, ಅದಕ್ಕೆ ಸಾಕಷ್ಟು ಮನ್ನಣೆ ದೊರೆತಿಲ್ಲ. ವರ್ಣ ದ್ವೇಷದ ಕಾಯಿದೆಗಳ ಬಿಗಿಯನ್ನು ಇನ್ನ ಷ್ಟು ಹೆಚ್ಚಿಸುವುದನ್ನೆ ಧೈರ್ಯವಾವಾಗುಳ್ಳ ದಕ್ಷಿಣ ಆಫ್ರಿಕೆಯ ಸರಕಾರ ನೀತಿಯು ಎಲ್ಲೆಡೆಯಿಂದಲೂ ಟೀಕೆಗೊಳಗಾಗಿದೆ. ಏಶೋಪ್ಯ ಖಂಡವರೇ ವ್ಯಲನ್ ಸರಕಾ ರವನ್ನು ಕಟುವಾಗಿ ನಿಂದಿಸಿರುವರು. ಸಳೆಯು ಏಶೋಪ್ಯೇತರ ನಿವಾಸಿಕರು ಜೂನು ೨೬ ನೇ ದಿನಾಂಕದಿಂದ ಇಂದಿನ ವರೆಗೂ ಅಹಿಂಸಾತ್ಮಕ ಚಳುವಳಿಯನ್ನು ಕ್ರಮಬದ್ಧವಾದ ರೀತಿಯಲ್ಲಿ ನಡೆಸುತ್ತಿ ರುವರು. ಪರಿಣಾಮವಾಗಿ ವಿಶ್ವದೃಷ್ಟಿ ಯು ಆಫ್ರಿಕೆಯಲ್ಲಿ ಕೇಂದ್ರೀಕೃತವಾಗು ವ ಸರ್ವ ಲಕ್ಷಣಗಳೂ ಕಂಡು ಬರುತ್ತಿವೆ.

ಸ್ವತಂತ್ರೋತ್ಸವದ ಸಂದರ್ಭ ಮೂ ತನಾಡ ವಾಗ ಭಾರತದ ಪ್ರಧಾನಿ ನೆಹ ರೂ ದಕ್ಷಿಣ ಆಫ್ರಿಕೆಯ ಪ್ರಶ್ನೆಯನ್ನೂ ಎತ್ತಿದರು. ಭಾರತೀಯರಾದವರು ಅಲ್ಲಿ ಅನುಭವಿಸುತ್ತಿರುವ ಸಂಕಷ್ಟಗಳ ಕುರಿ ತು ಸಹಾನುಭೂತಿಯನ್ನವರು ತೋರಿದ ರು. ಜಗತ್ತಿನ ಸ್ನೇಹಕ್ಕೆ ವರ್ಣದ್ವೇಷ ದಿಂದ ಎಷ್ಟರ ಮಟ್ಟಿನ ನಷ್ಟವುಂಟಾಗು ತ್ತಿದೆ, ಎಂದವರು ವರ್ಣಿಸಿದರು. ಮಾ ನವೀಯವಾದ ಹಾಗೂ ಮೂಲಭೂತ ಸ್ವ ರೂಪದ ಅಧಿಕಾರ ಪ್ರಾಪ್ತಿಗಾಗಿ ಅಹಿಂ ಸಾತ್ಮಕ ಚಳುವಳಿ ಹೂಡಿದುದಕ್ಕೆ ಎಲ್ಲ ನಾಗರಿಕ ರಾಷ್ಟ್ರಗಳೂ ಸಮರ್ಥಿಸುವುದರ ಲ್ಲಿ ಆಶ್ಚರ್ಯವೇನಿದೆ? ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಈಗಾಗಲೇ ರಾ ಷ್ಟ್ರದಾದ್ಯಂತ ಸಭೆಗಳನ್ನು ಕೂಡಿಸಿ, ಸ ತ್ಯಾಗ್ರಹಕ್ಕೆ ಸಂಪೂರ್ಣ ಬೆಂಬಲ ನೀಡು ವ ಗೊತ್ತುವಳಿಗಳನ್ನು ಸ್ವೀಕರಿಸಬೇಕೆ ದು ಪರಿಪತ್ರ ಕಳಿಸಿದೆ. ಕಮ್ಯೂನಿಸ್ಟ ರೆಂಬ ಆರೋಪದ ಮೇರೆಗೆ ಭಾರತೀಯ ಹಾಗೂ ಆಫ್ರಿಕದ ಧುರೀಣರನ್ನು ಜಂಧಿ ಸಿದ್ದು–ಚಳುವಳಿಯಲ್ಲಿ ಭಾಗವಹಿಸಿದವರ ನ್ನೆಲ್ಲ ನೆಟ್ಟಗೆ ಸೆರೆಮನೆಗೊಯ್ಯಲಾಗುತ್ತಿ ದೆ. ಈ ಭಾರಿಯ ಸತ್ಯಾಗ್ರಹದಲ್ಲಿ ಇಂ ದಿನ ವರೆಗೆ ೭೬೦೦ ಮಂದಿ ಜೈಲು ಕಂಡಿ ದ್ದಾರೆ, ಆರ್ಥ ದಂಡವನ್ನು ಕೊಡಲು ಯಾರೊಬ್ಬರೂ ಮುಂದಾಗದೆ, ಸ್ವೇಚ್ಛೆ ಯಿಂದ ಕಾರಾಗೃಹವನ್ನು ಸೇರುತ್ತಿರುವರು. ಈ ಚಳವಳಿಯು ಸುವ್ಯವಸ್ಥೆಯಿಂದ ನಿಜಕ್ಕೂ ಪ್ರಶಂಸನೀಯ. ಹಾಗೆಂದು ಚಳುವಳಿಗಾರರಿಗೆ ಕೋರ್ಟಿನಲ್ಲಿ ಹಿಂಸೆಯಾ ನ್ನನುಭವಿಸುವ ಪ್ರಸಂಗಗಳೂ ಬಂದಿವೆ. ಚಾಟಿ ಏಟಿನಂಥ ಅಮಾನುಷ ಶಿಕ್ಷೆಯ ನ್ನು ವಿಧಿಸಿ, ಕ್ರೂರವಾಗಿ ದಂಡಿಸುವುದೂ ನಡೆದಿದೆ. 'ನ'

ರಾಯಲಸೀಮೂ ಬರಗಾಲ ನಿಧಿ.

	ರೂ.
ವೀರಾಜಪೇಟೆ ಪಾರುಪತ್ತೆಗಾರರಿಂದ	೩೬೨ ೮ ೩
ಶ್ರೀ ಎ. ಸಿ ತಿಮ್ಮಯ್ಯ	೨೫೧
ಶ್ರೀ ಜಿ ಎಂ. ಮಂಜುನಾಥಯ್ಯ	೨೫೦
ಅಮ್ಮತ್ತಿ ಪಾರುಪತ್ತೆಗಾರರ ಮೂಲಕ	೨೦೦
ಅಮ್ಮತ್ತಿ ಸಬ್ ಕಮಿಟಿಯಿಂದ	೨೦೦
ಶ್ರೀ ಡಿ. ಹಜ್ ದಾಸಪ್ಪ	೧೫೧
ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಸ್ಟಾಫ್	೧೩೫/೮
ವೀರಾಜಪೇಟೆ ಕೊ ಪೆಡರೇಶನ್‌ನಿಂದ	೧೦೦
ಮಡಿಕೇರಿ ಪೊಲೀಸ್ ಸ್ವೇಷನ್ ಸ್ಟಾಫ್	೧೦೫ ೬ ೬
ವೀರಾಜಪೇಟೆ ,, ,,	೯೨ ೯ ೯
ಪೊನ್ನಂಪೇಟೆ ,, ,,	೫೦ ೧೪ ೦
ನಾಪೋಕ್ಲು ,, ,,	೨೬ ೧೦
ಸುಂಟಿಕೊಪ್ಪ ,, ,,	೨೭ ೯ ೬
ಸೋಮವಾರಪೇಟೆ ,, ,,	೪೩ ೯ ೯
ಪೊಲೀಸ್ ಟ್ರೈನಿಂಗ್ ಸ್ಕೂಲ್	೧೧ ೧೫ ೦
ನಾಪೋಕ್ಲು ಟೌನ್	೩೪ ೯ ೦
ನಾಪೋಕ್ಲು ಹೈಸ್ಕೂಲು	೪೬ ೧೨ ೦
ನಾಪೋಕ್ಲು ಪಾರುಪತ್ತೆಗಾರರ ಮೂಲಕ	೨೮ ೪ ೬
ಫಾರೆಸ್ಟ್ ಡಿಪಾರ್ಟ್‌ಮೆಂಟ್	೨೫ ೪ ೦
ಶ್ರೀ ಎಸ್. ಎಸ್. ರಾಮಮೂರ್ತಿ	೨೫
ಪೊಲೀಸ್ ಆಫೀಸ್ ಸ್ಟಾಫ್	೨೯ ೬ ೦
ಕೋ. ಸೂ. ರಿಜಿಸ್ಟ್ರಾರರ ಮೂಲಕ	೨೦೦
ಡಾ. ವೆಂಕಟಸುಬ್ಬಯ್ಯ	೧೦
ಗಾಳಿಬೀಡು ದವಸ ಭಂಡಾರ	೧೦೦
ಶ್ರೀ ಡಿ. ಎಸ್. ನಿರುವಾಣಪ್ಪ	೧೦೦
ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟ್	೧೨೫
ಶ್ರೀ ಎಂ. ಪಿ. ಮುತ್ತಣ್ಣ	೧೦೦
ಫಾರೆಸ್ಟ್ ಕನ್ಸರ್ವೇಟರ್	೩೬ ೪ ೦
ಶ್ರೀ ಕೆ. ಜೆ. ಪೆಳ್ಳಪ್ಪ	೧೫೦
ಟ್ರೆಜರಿ ಆಫೀಸಿನಿಂದ	೩೦ ೬ ೦
ಶ್ರೀ ಸಿ ಎಂ. ಪೂಣಚ್ಚ	೫೦
ಸೋಮವಾರಪೇಟೆ ಪಾರುಪತ್ತೆಗಾರರ ಮೂಲಕ	೩೬
ವೀರಾಜಪೇಟೆ ಮುನ್ಸಿಪಲ್ ಸ್ಟಾಫ್	೧೫ ೪ ೦
ಉ. ಕೊ. ಮುನ್ಸಿಂ ಕೋ. ಸೊಸೈಟಿ	೧೦೦
ವೀರಾಜಪೇಟೆ ಮುಹಿಲಾ ಸಪೋಜ ಪ್ರೆಸಿಡೆಂಟ್	೭೦
ಶ್ರೀ ಐ. ಪಿ. ಕಾರ್ಯಪ್ಪ	೨೫
ಶ್ರೀ ಐ. ಸಿ. ಸುಬ್ಬಯ್ಯ	೧೦೦
ಶ್ರೀ ಪಿ. ಎಂ. ನಾಣಯ್ಯ	೧೦೦
ಎಂಪ್ಲಾಯ್‌ಮೆಂಟ್ ಆಫೀಸ್ ಸ್ಟಾಫ್	೭ ೮ ೦
ಶ್ರೀ ಎಂ. ಎಸ್. ಅಚ್ಚಪ್ಪು	೬ ೩ ೦
ಸಿವಿಲ್ ಸರ್ಜನರ ಮೂಲಕ	೬
ಪೋಲೀಸ್ ಸ್ಪೆಷಲ್ ವಿಭಾಗದಿಂದ	೫೭ ೫
ಶ್ರೀ ಎಂ. ಎಸ್. ಕಾಳಪ್ಪ	೫೦ ೯
ಜೆ. ಪಿ. ಪಿ. ಮುಮ್ಮಡಿ	೫೦
ಶ್ರೀ ಕೆ ಜಿ ಈರಪ್ಪ	೫೦
ಸೊಡಾನ್ ವಂಮ್ಮು	೫೦
ಶ್ರೀ ಕೆ. ಎಂ. ತಿಮ್ಮಯ್ಯ	೫೦
ಶ್ರೀ ಪಿ. ಎಂ. ಜಂಗಪ್ಪ	೫೦
ಶ್ರೀ ಎಂ. ಶ್ರೀನಿವಾಸರಾವ್	೫೦
ಶ್ರೀ ಸಿ ಎಸ್. ರಾಮರಾವ್	೫೦
ಬಿಲ್ಡಿಂಗ್ ಕೋ. ಸೊಸೈಟಿ ಮಡಿಕೇರಿ	೫೦
ಡಾ. ಟಿ. ಬಿ. ಮೇಘಪ್ಪ	೫೦
ಕೊಡಗು ಪಬ್ಲಿಕ್ ಸರ್ವೆಂಟ್ಸ್ ಕೋ. ಸೊ.	೫೦
ಶ್ರೀ ಕೆ, ಪಿ. ಕುಟ್ಟಪ್ಪ	೫೦
ಐದು ರೂ. ಗಳ ಕೆಳಗೆ ಸಂಗ್ರಹವಾದದ್ದು	೪
ಈ ಹಿಂದೆ ಪ್ರಕಟವಾದದ್ದು	೯೯೫ ೭ ೩
ಜುಮ್ಮು ರೂ.	೧೦,೪೨೧ ೮ ೬

ಶ್ರೀ ಕೆ. ಸಿ ಪೀತಾಂಬರರವರು,
"ಕೊಡಗು" ಏಜೆಂಟರು,
ಕೊ ಡ್ಲಿ ಪೇ ಟೆ.

ಮುಖತ್ತು.

ಈಗ ಹೊಸದಾಗಿ ಇಂದಿರುವ ನಮ್ಮ ಅವೇರಿಕನ್ ಫೌಂಟನ್ ಪೆನ್ನುಗಳಿಗೆ ಆರ್ಡರು ಬುಕ್ ಮಾಡಲು ಏಜೆಂಟರು ಬೇಕಾಗಿದ್ದಾರೆ ಇದಕ್ಕೆ ಪ್ರತಿಯಾಗಿ 15 ಯೂ 17 ಜ್ಯೂವೆಲ್‌ಗಳುಳ್ಳ ಸ್ವಿಸ್ ನಿರ್ಮಿತ ರಿಸ್ಟ್‌ವಾಚು, ಸೈಕಲ್, ಅಥವಾ ರೇಡಿಯೋವು ಮುಖತ್ತಾಗಿ ದೊರೆಯುವುದು. ಇದು ಲಾಟರಿ, ಜೂಜು ಯಾ ಚಕ್ರಬಂಧ ಸ್ಪರ್ಧೆಯಲ್ಲ: ಒಂದು ಫೌಂಟನ್ ಪೆನ್ನಿಗೂ ಆದರೊಡನೆ ಮುಖತ್ತು ಕೆಟಲಾಗ್ ಮತ್ತಿತರ ಮಾಹಿತಿಗಳಿಗೆ ಬರೆಯಿರಿ.

THE UNIVERSAL MUTUAL CORPORATION (K M)
P. O. Box No. 4013, BOMBAY—7.

(ಎರಡನೇ ಪುಟದಿಂದ ಸಾಗಿದ್ದು)

"ನಿನಗೆಷ್ಟು ವಯಸ್ಸು?" ಎಂದು ಲಾರ್ಡ್ ಹೋರ್ಡರು ಕೇಳಿದಕ್ಕೆ "೯೨ ವರ್ಷ" ಎಂದು ಡಾ. ಫಿಶ್‌ಬೇನರು ಉತ್ತರಿಸಿದರು.

ಲಾರ್ಡ್ ಹೋರ್ಡರವರು ಡಾ. ಫಿಶ್‌ಬೆನ್ನರ ನಾಡಿಯನ್ನು ಪರೀಕ್ಷಿಸಿ "ನೀವು ಸೂರುವರುಷ ಬಾಳುವಿರಿ" ಎಂದು ಆಶೀರ್ವದಿಸಿದರು.

ಡಾ. ಫಿಶಾಬೇನರಿಗೆ ಅತ್ಯಂತ ಆಶ್ಚರ್ಯವಾಗಿ "ನಿಮಗೆ ಹೇಗೆ ಗೊತ್ತು?" ಎಂದು ಕೇಳಿದರು.

"ಯಾಕೆಂದರೆ ನೀವು ಅಜಲ ಚಿತ್ತರಾಗಿರುವಿರಿ" ಎಂದು ಹೇಳಿದರಂತೆ.

"ಆ ಅಜಲ ಚಿತ್ತವು ಅಥವಾ ಸ್ಥಿತಪ್ರಜ್ಞತ್ವವು ಹೇಗೆ ಆಶ್ಚರ್ಯವಾಗುವುದು." ಡಾ. ಫಿಶ್‌ಬೇನರು ಈ ಪ್ರಶ್ನೆಗೆ ಮುಂದಿನಂತೆ ಉತ್ತರ ಕೊಟ್ಟರು.

ನೀವು ಸದಾ ಹಸನ್ಮುಖಿಗಳಾಗಬೇಕು. ಮತ್ತು ಸ್ವಾಭಾವಿಕವಾಗಿ ಹಗುರಬೇಕು. ಜನರು ಯಾವುದೊಂದು ಘಟನೆಯನ್ನು ಕುರಿತು ಪ್ರಗ್ರಹಚಿತ್ತರಾದಾಗ ನೀವು ಆ ಸನ್ನಿವೇಶದೊಳಗಿನ ವಿನೋದಕರ ಅಂಶಗಳನ್ನು ಹೂತ್ರ ಗ್ರಹಿಸುವ ಅಭ್ಯಾಸವನ್ನಿಟ್ಟುಕೊಳ್ಳಬೇಕು. ಅಂಥ ಪ್ರಸಂಗಗಳಲ್ಲಿ ಕೈಕಾಲು ಕಳೆದುಕೊಳ್ಳದೆ ಮನಸಾರೆ ನಕ್ಕು ಬಿಡಿರಿ. ಆದರೆ ಗಂಡಾಂತರವನ್ನು ಎದುರಿಸುವ ಪ್ರಸಂಗವೇ ಬಂದಲ್ಲಿ ಅದನ್ನು ತಪ್ಪಿಸಿಕೊಳ್ಳಲು ಹವಣಿಸದೆ ಸ್ವಸ್ಥಚಿತ್ತದಿಂದ ಅದನ್ನೆದುರಿಸಿರಿ.

ಯಾರಾದರೂ ನಿಮ್ಮೊಡನೆ ಹುಚ್ಚಾಟಾಡಿ ಮತ್ತು ಅಸಂಬದ್ಧ ಚರ್ಚೆಯನ್ನಾರಂಭಿಸಿದರೆ ಅದರಿಂದ ದೂರವಾಗಿರಿ. ಅಂಥ ಮೂರ್ಖರ ಸಂಗಡ ವಾದಿಸದೆ ಅಲ್ಲಿಂದ ಹೊರಟು ಹೋಗಿರಿ

ಸತ್ಯ ಸಂಗತಿಗಳನ್ನು ಅರಿತುಕೊಳ್ಳುವಂಥಾದ ಚರ್ಚೆ ಇದ್ದರೆ ಅದರಲ್ಲಿ ಭಾಗವಹಿಸಿರಿ. ಆದರೆ ಗೊತ್ತುಗುರಿಗಳಿಲ್ಲದ ಪ ಗೊದ್ದು ಹರಟೆಯಲ್ಲಿ ಮಾತ್ರ ಕಾಲ ಹರಣೆ ಮಾಡಬೇಡಿರಿ. ಹಾಗೆ ಮಾಡುವುದರಿಂದ ನಿಮ್ಮ ರಕ್ತದ ಒತ್ತಡವು ಹೆಚ್ಚಾಗುವುದು. ಅದರಿಂದ ನಿಮ್ಮ ಚಿತ್ತಶ್ವಾಸವು ಕದಡುವುದು.

ನೀವು ಗಟ್ಟಿಯಾಗಿ ಕೂಗಿ ಮಾತಾಡಿದರೆ ನಿಮ್ಮ ರಕ್ತಾಭಿಸರಣಕ್ಕೆ ಮಾತ್ರ ತೀವ್ರಗತಿಯುಂಟಾಗುವುದು. ಆದರೆ ನೀವು ಯಾರ ಮೇಲೆ ರೇಗಿರುವಿರೋ ಅವನಿಗೇನೂ ಅಪಾಯವಾಗಲಾರದು. ಅದ್ದರಿಂದ ಕೂಗ ಬೇಡಿರಿ.

ಸಣ್ಣ ಪುಟ್ಟ ಘಟನೆಗಳನ್ನು ನಗೆಮೊಗದಿಂದ ಸ್ವಾಗತಿಸಿರಿ. ಅವುಗಳಿಂದ ನಿಮಗೆ ವೇದನೆಯಾಗ ಬಹುದಾದರೂ ಶಾಂತಿಯಿಂದ ಅವೆಲ್ಲವುಗಳನ್ನು ಪರಿಗ್ರಹಿಸಿರಿ. ಮತ್ತು ನಿಮ್ಮ ಮನಸ್ಸಿಗೆ ವಿರುದ್ಧವಾಗಿ ಏನಾದರೂ ನಡೆದರೆ ಅದರಿಂದ ಎಂದಿಗೂ ಕೋಪಿಸ ಬೇಡಿರಿ. ನಿಮ್ಮ ರಕ್ತದ ಒತ್ತಡಕ್ಕೆ ಅದು ತೀರಾ ಅಪಾಯಕರ.

ಅಂದರೆ ನೀವು ನಿಷ್ಕ್ರಿಯರಾಗಿ ಜೀವನ ಸಾಗಿಸಬೇಕೆಂದು ಇದರ ಅರ್ಥವಲ್ಲ. ಆದರೆ ನೀವು ಜಿತ್ತಕ್ಷೋಭವಾಗದಿದ್ದರೆ, ನೀವು ಸ್ಥಿತಪ್ರಜ್ಞರಾದರೆ ನೀವು ಸಹಜವಾಗಿ ಬಹಳಷ್ಟನ್ನು ಸಾಧಿಸಬಲ್ಲಿರಿ.

ಇದೇ ದೀರ್ಘಾರೋಗ್ಯದ ಗುಟ್ಟು

ಲೆ. ಜ. ರಾಜೇಂದ್ರ ಸಿಂಹಜಿಯವರಿಗೆ ಭಾರತದ ಮುಖ್ಯ ಸೇನಾಧಿಪತ್ಯ

ಜನರಲ್ ಕೆ ಎಂ. ಕಾರ್ಯಪ್ಪನವರು ೧೯೫೩ನೇ ಜನವರಿಯಲ್ಲಿ ಭಾರತದ ಮುಖ್ಯ ಸೇನಾಪತಿತ್ವದಿಂದ ನಿವೃತ್ತರಾಗಲಿರುವುದರಿಂದ ಅವರ ಸ್ಥಾನಕ್ಕೆ ಲೆಫ್ಟೆನೆಂಟ್ ಜನರಲ್ ಮಹಾರಾಜ ರಾಜೇಂದ್ರಸಿಂಹಜಿ, ಡಿ ಎಸ್ ಓ. ಇವರನ್ನು ೧೯೫೩ನೇ ಜನವರಿ ೧೫ ರಿಂದ ನೇಮಿಸಲಾಗಿದೆಯೆಂದು ಭಾರತ ಸರಕಾರದ ಪ, ಕಟಣೆ ಹೊರಟಿದೆ.

ಮುಖ್ಯ ಸೇನಾಪತಿ ಪದವಿಯನ್ನು ವಹಿಸಿಕೊಂಡ ನಂತರ ಲೆ. ಜ ರಾಜೇಂದ್ರ ಸಿಂಹಜಿಯವರಿಗೆ ಪೂರ್ಣ ಜನರಲ್ ತರಗತಿಯನ್ನು ಕೊಡಲಾಗುವುದೆಂದು ತಿಳಿಯುತ್ತದೆ. ರಾಜೇಂದ್ರಸಿಂಹಜಿಯವರು ಈಗ ದಕ್ಷಿಣ ಭಾಗದ ಸೇನೆಯ ಅಧಿಪತಿಯಾಗಿದ್ದಾರೆ.

ಲೆ. ಜ. ಶ್ರೀ ನಾಗೇಶರನ್ನು ಪಶ್ಚಿಮ ಸೇನೆಯ ಅಧಿಪತ್ಯದಿಂದ ದಕ್ಷಿಣ ಸೇನೆಯ ಅಧಿಪತ್ಯಕ್ಕೆ ವರ್ಗಾಯಿಸಲಾಗುವುದೆಂದೂ ಇತರ ಬದಲಾವಣೆಗಳೂ ಆಗಲಿವೆಯೆಂದೂ ತಿಳಿದುಬರುತ್ತದೆ.

ಲೆ. ಜ. ರಾಜೇಂದ್ರಸಿಂಹಜಿಯವರ ಜೀವನ ಕಥೆ.

ಲೆ. ಜ. ರಾಜೇಂದ್ರ ಸಿಂಹಜಿಯವರು ಭಾರತ ಸೈನ್ಯದ ಹಿರಿಯ ಅಧಿಕಾರಿಗಳಲ್ಲಿ ಎರಡನೆಯವರು. ೧೯೨೧ರಲ್ಲಿ ಅವರು ಭಾರತೀಯ ಸೈನ್ಯದಲ್ಲಿ ಕಮೀಶನ್ ಪಡೆದು ಮೂರು ವರ್ಷವೇ ೨ನೇ ರಾಯಲ್ ಲ್ಯಾನ್ಸರ್ಸ್ ದಳವನ್ನು ಸೇರಿದರು. ೧೯೨೧ರಲ್ಲಿ ಸ್ಕ್ವಾಡ್ರನ್ ಕಮಾಂಡರರಾಗಿ ಅವರು ಉತ್ತರ ಆಫ್ರಿಕಾಕ್ಕೆ ಹೋದರು.

೧೯೪೩ ಏಪ್ರಿಲ್‌ವಳಗೆ ೩ನೇ ಭಾರತೀಯ ಮೋಟಾರು ಬ್ರಿಗೇಡ್ ಮತ್ತು ೨ನೆ ರಾಯಲ್ ಲ್ಯಾನ್ಸರ್ ಇವೆರಡನ್ನೂ ಮೋಚಲಿ ಎಂಬಲ್ಲಿ ಎಷ್ಟೋ ಅಧಿಕ ಸಂಖ್ಯೆಯ ಜರ್ಮನ್ ಮತ್ತು ಇಟಾಲಿಯನ್ ಬಲಗಳು ಸುತ್ತುಗಟ್ಟಿದವು. ಬೇರೆ ದಾರಿಗಾಣದೆ ಸಿಕ್ಕಿಬಿದ್ದ, ಈ ಸೈನ್ಯಗಳು ಶತ್ರು ವ್ಯೂಹವನ್ನು ಭೇದಿಸಿ ಹೊರಬಿದ್ದು ಹೋಗಬೇಕೆಂದು ನಿರ್ಧರಿಸಿದವು.

ಆಗ ಮೇಜರ್ ಪದವಿಯಲ್ಲಿದ್ದ ರಾಜೇಂದ್ರ ಸಿಂಹಜಿಯವರು ತಮ್ಮ ರೆಜಿಮೆಂಟಿನ ಎರಡು ಸ್ಕ್ವಾಡ್ರನ್‌ಗಳೊಂದಿಗೆ ಪೃಷ್ಠಭಾಗದ ರಕ್ಷಣೆಗೆ ನಿಂತರು. ರೆಜಿಮೆಂಟಿನ ಮುಖ್ಯ ಕಚೇರಿ ಹೊರಬಿದ್ದು ಹೋಯಿತು. ಅಷ್ಟರಲ್ಲಿ ಅವರ ರೆಜಿಮೆಂಟಿನ ಬಹಳ ಭಾಗವನ್ನು ಜರ್ಮನರ ಟ್ಯಾಂಕುಗಳು ಪರಾಸ್ತಗೊಳಿಸಿದ್ದವು. ರಾಜೇಂದ್ರ ಸಿಂಹಜಿಯ ಸ್ಕ್ವಾಡ್ರನ್ನಿಗೆ ಮಾತ್ರ ಅಷ್ಟು ಧಕ್ಕೆಯಾಗಿರಲಿಲ್ಲ.

ಆಗಲೇ ಅವರು ಧೈರ್ಯದಿಂದ ಶತ್ರುವಿನ ಕೋಟೆಕಾನೆಗಳನ್ನು ಧಿಕ್ಕರಿಸಿ ತಮ್ಮ ಸೈನಿಕರೊಡನೆ ಮುನ್ನುಗ್ಗಿ ಜರ್ಮನರ ಹಿಂಬದಿಗೆ ಹೋಗಿ ವ್ಯೂಹವನ್ನೊಡೆದು ಹೊರಬಿದ್ದರು. ಬೆನ್ನಟ್ಟಿ ಬಂದ ಶತ್ರುಗಳನ್ನು ಹೊಡದೋಡಿಸಿ ಅವರೂ ಅವರ ಸೈನಿಕರೂ ಗುಂಡ್ದದ ಮರೆಯಲ್ಲಿ ಅವಿತುಕೊಂಡರು. ರಾತ್ರಿಯೂಡಿ ಮೇಲೆ ಅವರು ಮುಂದೆ ಸಾಗಿದರು. ಆದರೆ ಭದ್ರ ಸ್ಥಳಕ್ಕೆ ಹೋಗಿ ಸೇರುವ ಮೊದಲು ಒಂದೆರಡು ಬಾರಿ ಶತ್ರುಗಳೊಡನೆ ತಿಕ್ಕಾಟವಾಗದಿರಲಿಲ್ಲ. ಅಂತೂ ರಾಜೇಂದ್ರ ಸಿಂಹಜಿಯವರು ೬೦ ಜನ ಶತ್ರುಗಳನ್ನು ಸೆರೆ ಹಿಡಿದು ಸಂಗಡ ಕರೆದುಕೊಂಡು ಸುರಕ್ಷಿತ ಸ್ಥಳ ಸೇರಿದರು. ಈ ದಿಟ್ಟ ಮುಂದಾಳ್ತನಕ್ಕಾಗಿ ಅವರಿಗೆ ಡಿ. ಎಸ್. ಓ. ಬಿರುದು ಹೊರೆಯಿತು.

ಅಕ್ಟೋಬರ್ ೧೯೪೧ರಲ್ಲಿ ಭಾರತಕ್ಕೆ ಮರಳಿದ ಅವರಿಗೆ ಸಾರ್ವಜನಿಕ ಸಂಪರ್ಕದ ಡೆಪ್ಯುಟಿ ಡೈರೆಕ್ಟರರ ಪದವಿಯಿತ್ತು ಅಮೇರಿಕಕ್ಕೆ ವಿಶೇಷ ಕಾರ್ಯದ ಮೇಲೆ ಕಳುಹಿಸಲಾಯಿತು. ೧೯೪೩ರಲ್ಲಿ ಅವರು ತನೇ ರಾಯಲ್ ಲ್ಯಾನ್ಸರ್ಸಿನ ಕಮಾಂಡಂಟರಾದರು. ೧೯೪೫ ಮೇಯಲ್ಲಿ ಅವರು ಮಿಲಿಟರಿ ಅಟ್ಯಾಚಿಯಾಗಿ ಪುನಃ ಅಮೇರಿಕಕ್ಕೆ ಹೋದರು.

೧೯೪೬ ಸೆಪ್ಟೆಂಬರದಲ್ಲಿ ಅವರಿಗೆ ಬ್ರಿಗೇಡಿಯರ್‌ರಾಗಿ ಬಡತಿ ಸಿಕ್ಕಿತು. ಜೂನ್ ೧೯೪೭ರಲ್ಲಿ ಭಾರತದ ಕವಚ ದಳದ ಡೈರೆಕ್ಟರರಾದರು.

ಸ್ವಾತಂತ್ರ್ಯ ಬಂದಾಗ ಅವರನ್ನು ಮೇಜರ್ ಜನರಲ್ ಪದಕ್ಕೇರಿಸಿ ಡೆಲ್ಲಿ ಮತ್ತು ಪೂರ್ವ ಪಂಜಾಬ್ ಭಾಗದ ಅಧಿಪತ್ಯವನ್ನು ಕೊಡಲಾಯಿತು. ಆ ಭಾಗದಲ್ಲಿ ಗಲಭೆಗಳೆದ್ದಾಗ ಅವರು ಮಹತ್ವದ ಸೇವೆ ಮಾಡಿ ಕೀರ್ತಿ ಗಳಿಸಿದರು. ಲೆ. ಜ ಕಾರ್ಯಪ್ಪನವರು ಪಶ್ಚಿಮಾಧಿಪತ್ಯವನ್ನು ಬಿಟ್ಟುಕೊಟ್ಟು ಮುಖ್ಯ ಸೇನಾಪತಿಗಳಾದಾಗ ಲೆ. ಜ ರಾಜೇಂದ್ರ ಸಿಂಹಜಿಯವರು ಆ ಸ್ಥಾನಕ್ಕೆ ಬಂದರು. ೧೯೪೮ ಮೇಯಲ್ಲಿ ಅವರು ಭಾರತದ ೩ ಸೈನ್ಯ ವಿಭಾಗಗಳಲ್ಲಿ ಹಿರಿಯದಾದ ದಕ್ಷಿಣ ಸೇನೆಯ ಅಧಿಪತ್ಯ ವಹಿಸಿದರು. ಅವರ ನೇತೃತ್ವದಲ್ಲಿಯೇ ಹೈದರಾಬಾದು ಪೋಲೀಸ್ ಕ್ರಮ ಕ್ಷಿಪ್ರಫಲದಾಯಕವಾಯಿತು.

ನೀರಿನ ಮೇಲೆ ನಿಂತ ಗಾಂಧೀಜಿ!

ಹುಬ್ಬಳ್ಳಿಯ ಒಬ್ಬ ಶಾಲಾ ಮಾಸ್ತರರ ಕಲಾಕೌಶಲ್ಯವಿದು. ತಟ್ಟೆಯೊಂದರಲ್ಲಿ ತುಂಬಿದ ನೀರಿನ ಮೇಲೆ ಇದ್ದಿಲು ಪುಡಿಯನ್ನು ಚೆಲ್ಲಿ ಅದು ನೀರಿನ ಮೇಲೆ ಸಮವಾಗಿ ಹರಡಿ ನಿಂತಾಗ, ಅದರ ಮೇಲೆ ರಂಗವಲ್ಲಿಯ ಪುಡಿಯನ್ನು ಹರಡಿ ಗಾಂಧೀಜಿಯನ್ನು ಚಿತ್ರಿಸಿದ ಶ್ರೀ ನಾರಾಯಣ ಮೂಂಡ್ರೆಯವರು ತಮ್ಮ ರಂಗವಲ್ಲಿಯ ಚಿತ್ರಣಕ್ಕೊಂದು ವೈಶಿಷ್ಟ್ಯವನ್ನು ಸಂಪಾದಿಸಿಕೊಂಡರು.

ಇದುವರೆಗೂ ನೆಲದ ಮೇಲೆ ಬಣ್ಣ ಬಣ್ಣದ ರಂಗವಲ್ಲಿಯನ್ನು ಚೆಲ್ಲಿ ನಾನಾ ವಿಭೂತಿಗಳನ್ನು ಚಿತ್ರಿಸುತ್ತಿದ್ದರು. ಇದನ್ನು ನೋಡಿಯೇ ಬೆರಗಾಗಿದ್ದ ಜನರು ನೀರಿನ ಮೇಲೆ ಅಚ್ಚಳಿಯದೆ ಗಾಂಧೀಜಿಯನ್ನು ಸಜೀವ ಮೂರ್ತಿಯಂತೆ ಚಿತ್ರಿಸಿದ ಇವರ ಕೈಕುಶಲತೆಯನ್ನು, ಕಲೆಯೆ ಜ್ಞಾನವನ್ನು ಕಳೆದ ಶುಕ್ರವಾರದಿಂದ ಮುಂಗಳವಾರದ ವರೆಗೆ ಹುಬ್ಬಳ್ಳಿಯಲ್ಲಿ ನೋಡಿ ಹೊಗಳಿದರು.

ನೀರಿನ ಮೇಲಿದ್ದಂತೆಯೇ ಇದರ ಛಾಯಾಗ್ರಹಣವನ್ನು ಮಾಡಿಕೊಟ್ಟು ನ್ಯಾಶನಲ್ ಫೋಟೋ ಸ್ಟುಡಿಯೋದವರ ಪತ್ರಿಕೆಯಲ್ಲಿ ಶಬ್ದಗಳಿಂದ ಚಿತ್ರಿಸಿದ ಸುದ್ದಿಗೊಂದು ರೂಪವನ್ನು ತಂದು ಕೊಟ್ಟರು.

ಮೂಂಡ್ರೆಯವರ ಈ ನವೀನ ರೀತಿಯ ಕಲೆಗೆ—ಕೌಶಲ್ಯಕ್ಕೆ ಪ್ರೋತ್ಸಾಹ ಸಿಕ್ಕಿ ದಷ್ಟು ಹೆಚ್ಚು ಹೆಚ್ಚು ವರ್ಧಿಸಲಿ.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12ನೇ ನಂಬರಿನ ಒಂಟಿ ಮತ್ತು ಜೋಡು ಹೊಳಪಿನ ಕೋವಿಗಳು.
3. 12, 16 ಮತ್ತು 20ನೇ ನಂಬರಿನ ತೋಟಿಗಳು, ಕೋವಿ ಮದ್ದು ಮತ್ತು ಕೇಪುಗಳು.
4. 9″ × 4″ ಮತ್ತು 8″ × 4″ ಕಬ್ಬಿಣದ ತೊಲೆಗಳು (Girders)
5. 8′ × 3′ × 24 (Gage) ಕಬ್ಬಿಣದ ತಗಡುಗಳು.
6. $1\frac{3}{4}$″ × $\frac{5}{16}$″ ಉಕ್ಕಿನ ಪಟ್ಟಿಗಳು (Spring steel flates)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರಹ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಿಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು 'Special purchase permit' ಪಡೆಯಬೇಕಾಗಿದೆ.

ಎಂ. ಎಸ್. ಸೋಮಯ್ಯ (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್.)

ರಾಷ್ಟ್ರಪತಿಗಳ ಮೇಲ್ಪಂಕ್ತಿ

ಮಿತವ್ಯಯದಲ್ಲಿ.

ಭಾರತದ ಅಧ್ಯಕ್ಷರ ನಿವಾಸವಾದ ರಾಷ್ಟ್ರಪತಿ ಭವನದಲ್ಲಿ ಹಲವುರೀತಿಗಳಿಂದ ಮಿತವ್ಯಯದ ಪ್ರಾರಂಭವಾಗಿದೆ. ರಾಷ್ಟ್ರಪತಿ ಡಾ. ಜೇಂದ್ರ ಪ್ರಸಾದರು ಮೊದಲಿಂದಲೂ ಸರಳ ಜೀವನವನ್ನು ಮೆಚ್ಚಿ ಅ ನುಸರಿಸಿ ಬಂದವರು. ಅವರು ೧೯೫೦ ಜನವರಿ ೨೬ರಲ್ಲಿ ಅಧ್ಯಕ್ಷರಾದ ಕೂಡಲೆ ತಮ್ಮ ಸಂಬಳದಲ್ಲಿ ರಾಜ್ಯಭಟನೆಯಲ್ಲಿ ವಿಧಿಸಲ್ಪಟ್ಟ ೧೦೦೦೦ ರೂ. ಗಳಲ್ಲಿ ಪೂರಕ್ಕೆ ೧೫ ಸಾವಿರವನ್ನು ಕಡಿತ ಮಾಡಲು ಕೇಳಿಕೊಂಡರು. ಕರಗಳನ್ನು ಕಳೆದ ಮೇಲೆ ಅವರ ಬರಿ ೪೦೦೦ ರೂ ಬಂತು.

ಈಗ ಅವರು ಪುನಃ ರಾಷ್ಟ್ರಪತಿಗಳಾಗಿ ಆರಿಸಲ್ಪಟ್ಟ ಮೇಲೆ ೧೯೫೨ ಮೇ ೧೩ ರಿಂದ ತಮ್ಮ ಸಂಬಳದಲ್ಲಿನಾರಕ್ಕೆಳಂತೆ ಕಡಿತ ಮಾಡಬೇಕೆಂದು ಮಂತ್ರಿಮಂಡಳಕ್ಕೆ ವಿಜ್ಞಪ್ತಿಸಿಕೊಂಡರು. ಇದರಿಂದ ಅವರ ಸಂಬಳ ಆರು ಸಾವಿರಕ್ಕಿಳಿದು ಕರಗಳನ್ನು ವಜಾ ಮಾಡಿದ ಮೇಲೆ ರೂ. ೩,೫೦೦ ಮಾತ್ರ ಅವರ ಕೈಗೆ ಬರುವಂತಾಗಿದೆ.

ಬಹುಶಃ ಮನಸಿಲ್ಲದ ಮನಸಿನಿಂದ ರಾಷ್ಟ್ರಪತಿ ರಾಜೇಂದ್ರ ಭಾರೀ ಕಲ್ಲಿನ ಅರಮನೆಯಲ್ಲಿ ವಾಸಿಸಬೇಕಾಗಿದೆ. ಅವರು ಅದರಲ್ಲಿ ಬರೆ ಎರಡು ಕೋಣೆಗಳನ್ನು ತಮಗಾಗಿ ಇಟ್ಟುಕೊಂಡಿದ್ದಾರೆ. ಅದರ ೩೬ ಕೋಣೆಗಳಲ್ಲಿ ಭಾರತ ಸರಕಾರದ ಬೇರೆ ಬೇರೆ ಕಚೇರಿಗಳಿವೆ. ಅತ್ಯಂತ ವಿಶಾಲವಾದ ೫ ಕೋಣೆಗಳಲ್ಲಿ ರಾಷ್ಟ್ರೀಯ ವಸ್ತು ಶಾಲೆಯ ಪ್ರದರ್ಶನಗಳಿವೆ. ೨೩ ಕೋಣೆಗಳು ಅತಿಥಿಗಳಿಗೆ ವೀಸಲಾಗಿದ್ದು ಇನ್ನೊಂದು ಕೋಣೆಗಳಲ್ಲಿ ಅಧ್ಯಕ್ಷರ ಕುಟುಂಬದ ಜನರು ವಾಸಿಸುತ್ತಾರೆ ಉಳಿದೆಲ್ಲ ಕೋಣೆಗಳನ್ನು ಸರಕಾರಿ ಉಗ್ರಾಣಗಳೇ ಮೊದಲಾದವುಗಳಿಗೆ ಬಿಟ್ಟುಕೊಡಲಾಗಿದೆ. ಕಲ ಕೋಣೆಗಳನ್ನು ಮಾತ್ರ ಮನೋರಂಜನೆ ಮತ್ತು ಸ್ವಾಗತ ಭವನಗಳಾಗಿ ವೀಸಲಿಟ್ಟಿದೆ.

ದಿಲ್ಲಿಯಲ್ಲಿಯೂ, ಶಿಮ್ಲದಲ್ಲಿಯೂ ರಾಷ್ಟ್ರಪತಿ ಭವನದ ಇತರ ಎಲ್ಲ ಭಾಗಗಳನ್ನು ಬಾಡಿಗೆ ಕೊಟ್ಟು ಬಿಡಲಾಗಿದೆ. ಅದರಿಂದ ವರ್ಷಕ್ಕೆ ಲಕ್ಷ ರೂಪಾಯಿಯಷ್ಟು ಬಾಡಿಗೆ ಬರುತ್ತಿದೆ.

ರಾಷ್ಟ್ರಪತಿ ಭವನದ ಹೂದೋಟ ಜಗತ್ತಿನಲ್ಲೆಲ್ಲ ಸುಂದರವಾದ ಉದ್ಯಾನಗಳ ಸಾಲಿನಲ್ಲಿ ಸೇರುತ್ತದೆ. ಅದರ ಪೋಷಣೆಗೆ ೩೦ ಲಕ್ಷ ರೂಪಾಯಿಯಷ್ಟು ವೆಚ್ಚವನ್ನು ವಿಶೇಷವಾಗಿ ಇಳಿಸಲು ಶಕ್ಯವಾಗಿಲ್ಲ.

ಅಧ್ಯಕ್ಷರ ಸ್ವಂತ ಅವಶ್ಯಕತೆಗಳು ತೀರ ಕಡಿಮೆ. ಆದರೆ ಅವರಿಗೆ ಬೇರೊಂದು ವಸತಿಯಲ್ಲಿ ಬಿಡಾರವಿತ್ತರೂ ಅವರಲ್ಲಿ ಬಡಾವಣೆಗಳನ್ನು ಮಾಡದೆ ಸಾಧ್ಯವಿಲ್ಲ. ಮೇಲಾಗಿ ಭಾರತದ ಅಧ್ಯಕ್ಷರ ಗೌರವಕ್ಕೆ ಸರಿಯಾದ ವಸತಿಯಿರುವುದೂ ಅಗತ್ಯವಾದುದರಿಂದ ವೆಚ್ಚವನ್ನು ಇಷ್ಟೂ ಇಳಿಸುವುದು ಸಾಧ್ಯವಿಲ್ಲ.

ಕೇರಳದ ಭೂದಾನ ಯಾತ್ರೆ.

ಎಲ್ಲಾ ಕನಿಷ್ಠನಿಸ್ವೇತರ ಮಟ್ಟದಿಂದ ಕನ್ಯಾಕುಮಾರಿವರೆಗೆ ಕಾಲ್ನಡಿಗೆಯಲ್ಲೇ ಸಮಗ್ರ ಕೇರಳದ ಭೂದಾನ ಯಾತ್ರೆ ಕೈಕೊಳ್ಳಲಿದೆಯೆಂದು ಕೇರಳದ ಪ್ರಮುಖ ಕಾಂಗ್ರೆಸ್ ಮುಖಂಡರು ಪಾರ್ಲಿಮೆಂಟ್ ಸದಸ್ಯರಾಗಿರುವ ಶ್ರೀ ಕೆ. ಪಿ. ಮೊದವನ್ ನಾಯರ್‌ರವರು NAFEN ಪ್ರತಿನಿಧಿಗಳನ್ನು ಭೇಟಿಯಾದಾಗ ತಿಳಿಸಿದರು. ಭೂದಾನಕ್ಕೆ ಅರ್ಹರಿರುವ ಕೃಷಿಕರಿಗೆ ಹಂಚುವ ಬಗ್ಗೆ ಜಮೀನನ್ನು ಈ ಸಮಿತಿಯು ಸಂಗ್ರಹಿಸುವುದು.

ಈ ಸಮಿತಿಯಲ್ಲಿ ಕಮ್ಯೂನಿಷ್ಟರು ವಿನಹ ಕಾಂಗ್ರೆಸ್, ಸೋಶಲಿಸ್ಟ್, ಕಿಸಾನ್ ಮಜದೂರ್, ಪ್ರಜಾಪಕ್ಷ ಮತ್ತು ಇತರ ಎಲ್ಲಾ ಸಮಾಜ ಸೇವಾ ಕಾರ್ಯಕರ್ತರೂ ಇರುವರು. ಸಮಿತಿಯ ನೇತೃತ್ವವನ್ನು ಶ್ರೀ ಶಂಕರರಾವ್ ದೇವರವರು ವಹಿಸುವರು. ನವೆಂಬರ್ ತಾ. ೧೫ ರಂದು ಈ ಯಾತ್ರೆ ಆರಂಭವಾಗುವುದು.

ವಿನೋಬಾವರ ಆಶೀರ್ವಾದ

ಭೂದಾನ ಚಳವಳವನ್ನು ಆರಂಭಿಸಿದ ಆಚಾರ್ಯ ವಿನೋಬಾ ಭಾವೆಯವರ ಬೆಂಬಲವನ್ನು ಪಡೆಯಬೇಕೆಂದು ಈ ಯೋಜನೆಯ ನೇತಾರ ಆಸೆಯಿತ್ತು. ಆಚಾರ್ಯರು ಈ ಯೋಜನೆಯನ್ನು ಹರಸಿದರು. ಉತ್ತರ ಹಿಂದೂಸ್ಥಾನದಲ್ಲಿ ತಾನು ಕೈಕೊಳ್ಳಬೇಕಾದ ಅವಸರದ ಕಾರ್ಯಕ್ರಮಗಳು ಹಲವು ಇರುವುದರಿಂದ ದಕ್ಷಿಣದಲ್ಲಿ ಈ ಚಳವಳವನ್ನು ಉದ್ಘಾಟಿಸಲು ಮಲಬಾರಿಗೆ ವರೆಗೆ ತಾನು ಬರಲು ಸಾಧ್ಯವಾಗದೆಂದು ವಿನೋಬಾರವರು ತಿಳಿಸಿದರು.

ಇಡೀ ಕೇರಳವನ್ನು ಕಾಲ್ನಡಿಗೆಯಲ್ಲೇ ಸಂಚರಿಸುವುದು ಈ ಶಿಷ್ಯವೃಂದಲದವರ ಉದ್ದೇಶವಾಗಿರುತ್ತದೆ. ಪ್ರತಿವಿಂದ ಜನಸಂಖ್ಯೆ ಮತ್ತು ಹಂಚಲು ಪೊರೆಯಬಹುದಾದ ಅತ್ಯಲ್ಪ ಜಮೀನಿನ ಪೈಸೆಯಿಂದ ತಮಗೆ ದಾನರೂಪವಾಗಿ ಹೆಚ್ಚಿನ ಜಮೀನು ದೊರೆಯಬಹುದೆಂದು ತಾವು ನಿರೀಕ್ಷಿಸುತ್ತಿಲ್ಲವೆಂದೂ ಜಮೀನು ಇರದವರ ಪಂದಿಯ ಕಡೆಗೆ ಹೆಚ್ಚಿನ ಒಲವು ದುತ್ತು ಸಹಾನು ಭೂತಿಗಳನ್ನು ಪ್ರದರ್ಶಿಸುವಂತೆ ಜನರಲ್ಲಿ ಸೌಹಾರ್ದ ಭಾವನೆಯನ್ನು ಉಂಟು ಮಾಡುವುದೇ ತಮ್ಮ ಸಂಚಾರದ ಮುಖ್ಯ ಉದ್ದೇಶವೆಂದೂ ಈ ಉದ್ದೇಶ ಫಲಕಾರಿಯಾಗಬಹುದೆಂಬ ವಿಶ್ವಾಸ ಸಮಿತಿಯಲ್ಲಿರುವುದಾಗಿಯೂ ಶ್ರೀ ನಾಯರರು ತಿಳಿಸಿರುತ್ತಾರೆ.

ಸದ್ಯದ ಅವಸರದ ಕಾರ್ಯಕ್ರಮಗಳು ಮುಗಿಸಿ ಒಂದಿಷ್ಟು ಬಿಡು ಬೊರೆಯುತ್ತಲೇ ತಾವು ಕೇರಳ ಸಂದರ್ಶಿಸುವುದಾಗಿ ಆಚಾರ್ಯ ವಿನೋಬಾ ಭಾವೆಯವರು ಸನ್ಮತಿಸಿದುವರೆಂದೂ ಅವರು ಹೇಳಿದ್ದಾರೆ.

ಹೆಲಿಕಾಲ!

'ಕಾಟುಂಬದಲ್ಲಿ ಹೆಚ್ಚಿಚ್ಚು ಆಭರಣಗಳು, ಸೀರೆಗಳು, ಟ್ರಿಕ್ಸೈಕಲ್‌ಗಳು ಹಾಗೂ ಮೋಟಾರುಗಳನ್ನಿಟ್ಟುಕೊಳ್ಳಲು ಮಕ್ಕಳ ಸಂಖ್ಯೆಯನ್ನು ಕಡಿಮೆಮಾಡುವ ಆಂದೋಲನವು. ಈಗ ಬೆಳೆಯತೊಡಗಿದೆ' ಹೀಗೆಂದು ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಜಿಲ್ಲಾ ವೈದ್ಯಕೀಯ ಅಧಿಕಾರಿಗಳ ಸಭೆಯಲ್ಲಿ ಮೊನ್ನೆಯಷ್ಟೆ ಹೇಳಿದರು.

ಅವರು ಮುಂದೆ ಸಾಗಿ, 'ಮೇಲ್ವರ್ಗ ಹಾಗೂ ಮಧ್ಯಮ ವರ್ಗದವರಲ್ಲಿ ಮಕ್ಕಳಿಗಿಂತ ಇತರ ಸಾಧನ ಸಂಪತ್ತಿಗೆ ಜನರಿಗೆ ಹೆಂಚಲ ಹೆಚ್ಚತೊಡಗಿದೆ ಎಂಬ ಮಕ್ಕಳ ಬರುವಿಕೆಯನ್ನು ತಾವು ಕಡಿಗಟ್ಟುತ್ತಿರುವರೆಂಬುದು ಸಹ ಅವರಿಗೆ ಗೊತ್ತಾಗಿಲ್ಲ. ಜನರು ಕಡಮೆ ಮಕ್ಕಳನ್ನು ಹೆಚ್ಚಿಚ್ಚು ರೇಡಿಯೊ ಹಾಗೂ ಮೋಟಾರು ಕಾರುಗಳನ್ನು ಬೇಡುತ್ತಿದ್ದಾರೆ. ಸಂತತಿ ಸಂಯಮ ಹಾಗೂ ಕೌಟುಂಬಿಕ ಯೋಜನೆಯ ಬಗ್ಗೆ ಮಾತನಾಡಲು ಅವರು ಹೆಚ್ಚಿಚ್ಚು ರೇಡಿಯೊ ಹಾಗೂ ಮೋಟಾರು ಕಾರುಗಳನ್ನು ಕೇಳುವರು. ಇದೂ ಸರಿಯೊದುದೊ ಅಲ್ಲವೊ ಎಂಬುದು ಸ್ಪಷ್ಟಗೆ ನಿಶ್ಚಿತವಾಗಿ ತಿಳಿಯುತ್ತಾಗಿದೆ. ಆದರೆ ಈ ಪ್ರವಾಹವನ್ನು ತಡೆಯುವ ಶಕ್ತಿ ನನಗೆ ಇಹೆಯೆಂದು ಅನಿಸುವದಿಲ್ಲ' ಎಂದರು.

ಮನರಂಜನೆ ಬೇಡ

ನೃತ್ಯ ಹಾಗೂ ಇತರ ಮನರಂಜನೆಯ ಕೂಟಗಳನ್ನು ಮುಚ್ಚಬೇಕೆಂದೂ, ಚಲಚಿತ್ರ ಪ್ರದರ್ಶನಗಳನ್ನು ಪರಿಮಿತಗೊಳಿಸಬೇಕೆಂದೂ 'ಮುಸ್ಲಿಂ ಬಾಂಧವ್ಯ ಸಂಸ್ಥೆಯ ಧುರೀಣ ಹೆಸನ ಹೊಣ್ಣಿಬೀ ಮುಂತಾದವರು ತುರ್ತಿಸ್ಥ ಸರಕಾರಕ್ಕೆ ಕೇಳಿಕೊಂಡಿದ್ದಾರೆ.

ತುರ್ತಿಸ್ಥಿತಿಯ ಯುವಕರ ಬಾರುಗಳು, ರಾತ್ರಿ ಕ್ಲಬ್ಬುಗಳು ಹಾಗೂ ಇತರ ಮನರಂಜನೆಯ ಸ್ಥಳಗಳು ವಿದೇಶಿ ಸ್ವೈನಿಕರ ಅಕ್ಕಮಾಣಕ್ಕಿಂತ ಹೆಚ್ಚು ಗಂಡಾಂತರಕಾರಿಯೆಂದು ಅವರು ತುರ್ತಿಸ್ಥಿತಿಯ ಮುಖ್ಯಮಂತ್ರಿ ಅಲಿಮೆಹರಂಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಆವುಗಳಿಂದ ತುರ್ತಿಸ್ಥಿತಿಯ ಯುವಕರ ವೈಫಲ್ಯಕ್ಕೆ ಕಾರಣವಾಗಿ ರಾಷ್ಟ್ರ ವಿನೋಬಾ ಕಾರ್ಯಕ್ಕೆ ಪ್ರತಿಕೂಲವನ್ನುಂಟುಮಾಡುವಂತೆ ಆಗಬಹುದೆಂದು ಅವರು ತಿಳಿಸಿದ್ದಾರೆ.

ಅನೀತಿಯನ್ನು ಪೋಷಿಸುವ ಚಲನಚಿತ್ರಗಳನ್ನು ಪ್ರತಿಬಂಧಿಸಬೇಕೆಂದೂ, ೩೧ ವರ್ಷದ ಕೆಳಗಿನ ಹುಡುಗ-ಹುಡುಗಿಯರಿಗೆ ಶೈಕ್ಷಣಿಕ ಹಾಗೂ ಅಲ್ಪ ಮನರಂಜನೆಯ ಚಿತ್ರಗಳನ್ನು ನೋಡುವುದಕ್ಕೆ ಅವಕಾಶ ವೀಯಬಹುದಂಥ ಕಾಯದೆಯನ್ನು ಮಾಡಬೇಕೆಂದೂ ಅವರು ಕೇಳಿದ್ದಾರೆ.

ನಿತ್ಯ ಜೀವನದಲ್ಲಿ ಇಸ್ಲಾಂ ಧರ್ಮದ ತತ್ವಗಳನ್ನು ಅನುಸರಿಸಬೇಕೆಂದೂ ತುರ್ತಿಸ್ಥಿತಿಯ ರಾಜ್ಯಭಟನೆಯ ಕಾರಣವನ್ನು ಆಧಾರವಾಗಿಟ್ಟುಕೊಳ್ಳಬೇಕೆಂದೂ ಮುಸ್ಲಿಂ ಬಾಂಧವ್ಯ ಸಂಸ್ಥೆಯು ಪ್ರತಿಪಾದಿಸಿದೆ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾಪ ಶೇರು ಮೊಖಲಗೆ	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಾತಿ	ರೂ.	8,86,000

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ವಸ್ತು ಚಿನ್ನದ ನಗಗಳ ಆಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಮತ್ತು ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ, ವಾರ್ಡರ್ಸ್ ಮತ್ತು ವಿಶ್ವಭಾರತಿ ಇನ್ವೆಸ್ಟ್ಮೆಂಟ್ ಕಂಪೆನಿಗಳ ಫ್ರೀಮಿಯಂ ಹಣವನ್ನು ತೊಂಡಿ ಕೊಳ್ಳಲಾಗುವುದು. ಬ್ಯಾಂಕಿನ ದೀರ್ಘ ಕಂತಿನ ಸಾಲದ ಶಾಖೆಯ ಮೂಲಕ ದೀರ್ಘ ಕಂತಿನ ಸಾಲ ಕೊಡುವ ವ್ಯವಸ್ಥೆ ಮಾಡಲಾಗಿದೆ. ಹೆಚ್ಚಿನ ಮಾಹಿತಿಯನ್ನು ಅಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಪೊನ್ನಂಪ್ಪ, ಕಾರ್ಯದರ್ಶಿ. — ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ ಮತ್ತು ಮ್ಯಾನೇಜರ್.

Edited printed and published by P. I. Belliapa at 'Kodagu' Press, Mercara, for Kodagu Ltd.